ಸಂಪುಟ 01 । ಸಂಚಿಕೆ 61 । ಭಾನುವಾರ 11 ಜನವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**01)ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಪುಣ್ಯತಿಥಿ**

ಅವರು ಸ್ವತಂತ್ರ ಭಾರತದ ಎರಡನೇ ಪ್ರಧಾನಿಯಾಗಿದ್ದರು. ಅವರು 'ಜೈ ಜವಾನ್ ಜೈ ಕಿಸಾನ್' ಘೋಷಣೆಯನ್ನು ಜನಪ್ರಿಯಗೊಳಿಸಿದರು. ಅವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಹೃದಯಾಘಾತದಿಂದಾಗಿ, ಅವರು 11 ಜನವರಿ 1966 ರಂದು ನಿಧನರಾದರು. ಮತ್ತು ಅವರನ್ನು ಜಾಗತಿ-ಕವಾಗಿ 'ಶಾಂತಿಯ ಮನುಷ್ಯ' ಎಂದೂ ಕರೆಯಲಾಗುತ್ತಿತ್ತು

**2)ರಾಷ್ಟ್ರೀಯ ಮಾನವ ಕಳ್ಳಸಾಗಣೆ ಜಾಗೃತಿ ದಿನ**

ಮಾನವ ಕಳ್ಳಸಾಗಣೆ ನಿರಂತರ ಸಮಸ್ಯೆಯ ಬಗ್ಗೆ ಜಾಗೃತಿ ಮೂಡಿಸಲು ಜನವರಿ 11 ರಂದು ಆಚರಿಸಲಾಗುತ್ತದೆ. ಮಾನವ ಕಳ್ಳಸಾಗಣೆ ಬಲಿಪಶುಗಳ ದುಃಸ್ಥಿತಿಯ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅವರ ಹಕ್ಕುಗಳನ್ನು ಉತ್ತೇಜಿಸುವುದು ಮತ್ತು ರಕ್ಷಿಸುವುದು ಈ ದಿನದ ಉದ್ದೇಶವಾಗಿದೆ.

## ಸುಭಾಷಿತ

ಸಂತೋಷವಾಗಿ ಇರುವುದರ ಗುಟ್ಟು ಹೆಚ್ಚು ಬಯಸುವುದರಲ್ಲಿ ಇಲ್ಲ; ಕಡಿಮೆ ಇರುವುದರಲ್ಲೇ ತೃಪ್ತಿಪಡುವುದರಲ್ಲಿ ಇದೆ.

ಸಾಕ್ರಟೀಸ್

# ವಿಜಯಪುರದಲ್ಲಿ ಶೀಘ್ರದಲ್ಲೇ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ:ಸಿಎಂ ಸಿದ್ದರಾಮಯ್ಯ

**ವಿಜಯಪುರ: ವಿಜಯಪುರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಬೇಕೆಂದು ಹಿಂದಿನ ಸರ್ಕಾರ ಪಿಪಿಪಿ ಮಾದರಿಯಲ್ಲಿ ಕೈಗೊಳ್ಳಬೇಕೆಂದು ಚಿಂತಿಸಿತ್ತು. ಮುಂದಿನ ದಿನಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಹೇಳಿದರು. ವಿಜಯಪುರ ಜಿಲ್ಲೆಯಲ್ಲಿ ಶುಕ್ರವಾರ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಮಾತನಾಡಿದರು.**

ದೇವರಾಜ ಅರಸು ಅವರ 7 ವರ್ಷ 239 ದಿನಗಳ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿದ್ದ ದಾಖಲೆಯನ್ನು ಮುರಿದು ಕರ್ನಾಟಕದ ದೀರ್ಘಾವಧಿ ಮುಖ್ಯಮಂತ್ರಿ ಎಂಬ ದಾಖಲೆ ಮಾಡಲು ಸಾಧ್ಯವಾಗಿದ್ದು ಜನರ ಆಶೀರ್ವಾದದಿಂದ. ಅದಕ್ಕಾಗಿ ರಾಜ್ಯದ ಜನತೆಗೆ ಕೃತಜ್ಞತೆಗಳು ಎಂದು ಹೇಳಿದರು. ವಿಜಯಪುರದ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಆರು ಕ್ಷೇತ್ರಗಳನ್ನು ಗೆದ್ದಿದ್ದು, ಚುನಾವಣೆಯಲ್ಲಿ 135 ಕ್ಷೇತ್ರಗಳಲ್ಲಿ ಗೆಲ್ಲಬೇಕಾದರೆ ವಿಜಯಪುರ ಜನರ ಆಶೀರ್ವಾದ ಬಹಳ ಮುಖ್ಯ ಪಾತ್ರ ವಹಿಸಿದೆ. 45 ವರ್ಷಗಳಿಂದ ಇಡೀ ರಾಜ್ಯ ಸುತ್ತಾಡಿದ್ದೇನೆ.



ವಿಜಯಪುರ ಜಿಲ್ಲೆಯ ಜನ ಆಶೀರ್ವಾದ ನನ್ನ ಮೇಲಿದೆ.

ಡಿಕೆಶಿ ತಿನ್ನಿಸಿದ ಸ್ವೀಟನ್ನು ಬಾಯಿಂದ ಎಸೆದ ಸಿದ್ದರಾಮಯ್ಯ, ಯಾಕೆ ಹೀಗೆ ಮಾಡಿದರು ಎಂದು ಕೇಳುತ್ತಿದ್ದಾರೆ ನೆಟ್ಟಿಗರು; ಗಿಜಜಿಠ ವಿಜಯಪುರ ಜಿಲ್ಲೆಯಲ್ಲಿ ರೂ.800 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ರೂ.82 ಕೋಟಿ ವೆಚ್ಚದ ಕಾಮಗಾರಿಗಳ ಉದ್ಘಾಟನೆ ಹಾಗೂ ರೂ.730 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗಳ ಶಂಕುಸ್ಥಾಪನೆ ಮಾಡಲಾಗಿದೆ. ರಾಣಿ ಚನ್ನಮ್ಮ ಪ್ರತಿಮೆ ಲೋಕಾರ್ಪಣೆ ಸೇರಿದಂತೆ ಕಿತ್ತೂರು ರಾಣಿ ಚೆನ್ನಮ್ಮ ಬಸ್ ನಿಲ್ದಾಣ ಎಂದು ನಾಮಕರಣ ಮಾಡಲಾಗಿದೆ. ಈ ಭಾಗದಲ್ಲಿ ಸೈಕ್ಲಿಸ್ಟ್ ಗಳಿಗಾಗಿ ದಕ್ಷಿಣ ಭಾರತದಲ್ಲಿಯೇ ಮೊದಲ ವೆಲೊಡ್ರೋಮ್‌ನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು. ವಿಜಯಪುರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಬೇಕೆಂದು ಹಿಂದಿನ ಸರ್ಕಾರ ಪಿಪಿಪಿ ಮಾದರಿಯಲ್ಲಿ ಕೈಗೊಳ್ಳಬೇಕೆಂದು ಚಿಂತಿಸಿತ್ತು. ಮುಂದಿನ ದಿನಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲಾಗುವುದು. ರಾಜ್ಯದಲ್ಲಿ 71 ವೈದ್ಯಕೀಯ ಕಾಲೇಜುಗಳಿದ್ದು ಈ ಪೈಕಿ 22 ಸರ್ಕಾರಿ ವೈದ್ಯಕೀಯ ಕಾಲೇಜುಗಳಿವೆ. ಉಳಿದ ಜಿಲ್ಲೆಗಳಲ್ಲಿಯೂ ಟ್ರಾಮಾ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಿದರು.

ಬಸನಗೌಡ ಯತ್ನಾಳ್ ಅವರು ಅನೇಕ ಬೇಡಿಕೆಗಳನ್ನು ಇಟ್ಟಿದ್ದು, ಕನಕದಾಸ ವೃತ್ತದಿಂದ ಅಂಬೇಡ್ಕರ್ ಹಾಗೂ ಶಿವಾಜಿ ವೃತ್ತದವರೆಗೆ ರೂ.160 ಕೋಟಿ ವೆಚ್ಚದ ಮೂರು ಕಿಮೀ ಮೇಲ್ಸೇತುವೆ ಮಾಡಬೇಕೆಂದು ಮನವಿ ಮಾಡಿದ್ದಾರೆ, ಅದನ್ನು ನೆರವೇರಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ್, ಶಿವಾನಂದ್ ಪಾಟೀಲ್, ಬಿ.ಎಸ್. ಸುರೇಶ್, ರಾಮಲಿಂಗಾ ರೆಡ್ಡಿ, ಲಕ್ಷ್ಮಿ ಹಬ್ಬಾಳ್ಕರ್ ಸೇರಿದಂತೆ ಇತರ ಸಚಿವರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಉಪಸ್ಥಿತರಿದ್ದರು.

## ತಿಂಥಣಿ ಬ್ರಿಡ್ಜ್ ನಲ್ಲಿ ಹಾಲುಮತ ಸಂಸ್ಕೃತಿ ವೈಭವ..!

■ ನೈಜ್ಯ ದೇಸೆ ನ್ಯೂಸ್

**ಸಿಂಧನೂರು ಎಪಿಎಂಸಿ ವರ್ತಕರ ಸಂಘದಿಂದ 9 ಕ್ವಿಂಟಲ್ ಅಕ್ಕಿ ದಾನ ತಿಂಥಣಿ ಬ್ರಿಡ್ಜ್ ಕನಕಗುರು ಪೀಠದಲ್ಲಿ ಜ.12, 13, 14, ಮೂರು ದಿನಗಳ ಕಾಲ ಅದ್ದೂರಿಯಾಗಿ ನಡೆಯುವ ಹಾಲುಮತ ಸಂಸ್ಕೃತಿ ವೈಭವ ಕಾರ್ಯಕ್ರಮಕ್ಕಾಗಿ ಸಿಂಧನೂರು ಎಪಿಎಂಸಿ ವರ್ತಕರ ಸಂಘದಿಂದ ಗಣೇಶ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮುಖಂಡ ಕೆ.ಕರಿಯಪ್ಪ ನೇತೃತ್ವದಲ್ಲಿ ಎಪಿಎಂಸಿ**



**ವರ್ತಕರು ಕನಕ ಗುರುಪೀಠ ತಿಂಥಣಿ ಬ್ರಿಡ್ಜ್ ಮಠಕ್ಕೆ ಪ್ರತಿ ವರ್ಷದಂತೆ ಈ ವರ್ಷವು 9 ಕ್ವಿಂಟಾಲ್ ಅಕ್ಕಿ ದಾನ ನೀಡಲಾಯಿತು.**

ಈ ಸಂದರ್ಭದಲ್ಲಿ: ತಾಲೂಕು ಕುರುಬ ಸಮಾಜದ ಅಧ್ಯಕ್ಷ ಕೆ.ಬೀಮಣ್ಣ, ತಾಲೂಕು ಕನಕ ಗುರುಪೀಠದ ಅಧ್ಯಕ್ಷ ಅಮರೇಶ ಪ್ಪಮೈಲಾರ, ಬಾಗೋಡಿ ಫಕೀರಪ್ಪ ತಿಡಿಗೋಳ, ಹಾಗೂ ಸಮಾಜದ ಮುಖಂಡರು ಗಣ್ಯರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮ ಕೈಗೊಳ್ಳಿ: ಎನ್.ಎಸ್.ಬೋಸರಾಜು



■ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ ಬೇಸಿಗೆಯಲ್ಲಿ ತಾಲೂಕಿನ ಗ್ರಾಮೀಣ ಭಾಗ ಸೇರಿದಂತೆ ಮಾನ್ವಿ ಪಟ್ಟಣದಲ್ಲಿನ ಜನರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ತಾಲೂಕಿನಲ್ಲಿರುವ ಎಲ್ಲಾ ಕುಡಿಯುವ ನೀರಿನ ಕೆರೆಗಳನ್ನು ತುಂಬಿಸುವುದಕ್ಕೆ ಕ್ರಮ ಕೈಗೊಳ್ಳುವಂತೆ ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಅಧಿಕಾರಿ ಎ.ಇ.ಇ. ಸತೀಶರವರಿಗೆ ಸೂಚಿಸಿದರು,**

ವಿದ್ಯುತ್ ಪೂರೈಕೆಯಲ್ಲಿ ಯಾವುದೆ ಅಡಚಣೆಯುಂಟಾಗದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಜೆಸ್ಕಾಂ ಇಲಾಖೆಯ ಎ.ಇ.ಇ. ವೈದ್ಯನಾಥಸ್ವಾಮಿಯವರಿಗೆ ಸೂಚಿಸಿದರು. ತಾಲೂಕಿಗೆ ಮಂಜೂರಾಗಿರುವ ರಸ್ತೆ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ ಶೀಘ್ರವೇ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಲೋಕೋಪಯೋಗಿ ಇಲಾಖೆಎ.ಇ.ಇ. ನಬೀರಸುಲ್ ರವರಿಗೆ ಸೂಚಿಸಿದರು. ವಿವಿಧ ಇಲಾಖೆಗಳಿಗೆ ಸರ್ಕಾರದಿಂದ ಮಂಜೂರಾದ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಸಭೆಯಲ್ಲಿ ಶಾಸಕ ಹಂಪಂ ನ್ಯನಾಯಕಮಾತನಾಡಿದರು.

ತಹಶೀಲ್ದಾರ್ ಭೀಮರಾಯ ಬಿ ರಾಮಸಮುದ್ರ , ಪಿ.ಐ. ಸೋಮಶೇಖರ ಎಸ್. ಕೆಂಚರೆಡ್ಡಿ, ಚೌಹಾಣ್, ಪುರಸಭೆ ಮುಖ್ಯಾಧಿಕಾರಿ ಪರಶುರಾಮದೇವಮಾನೆ, ಬಿ.ಇ.ಓ. ಚಂದ್ರಶೇಖರ .ಡಿ, ಸೇರಿದಂತೆ ಇನ್ನಿತರ ಇಲಾಖೆಯ ಅಧಿಕಾರಿಗಳು ಭಾಗವಹಿಸಿದರು.

## ಜ.11ರಂದು ಮತದಾರರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ವಿರೋಧಿ ಹೋರಾಟ ಸಮಿತಿಯಿಂದ ಸಂವಾದ

■ ನೈಜ್ಯ ದೇಸೆ ನ್ಯೂಸ್

**ನಗರದ ಟೌನ್‌ಹಾಲ್‌ನಲ್ಲಿ ಜ.11ಭಾನುವಾರದಂದು ಮತದಾರರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ವಿರೋಧಿ ಹೋರಾಟ ಸಮಿತಿಯಿಂದ ಬೆಳಿಗ್ಗೆ 10.30 ಗಂಟೆಗೆ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಹುಸೇನ್‌ಸಾಬ್, ಚಂದ್ರಶೇಖರ ಗೊರೇಬಾಳ, ಎಂ.ಗಂಗಾಧರ, ಬಸವಂತರಾಯಗೌಡ ಕಲ್ಲೂರು, ಬಸವರಾಜ ಬಾದರ್ಲಿ, ಜಿಲಾನಿಪಾಷಾ ಅವರು ತಿಳಿಸಿದ್ದಾರೆ.**



ಈ ಕುರಿತು ಶನಿವಾರ ಜಂಟಿ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಂವಾದದಲ್ಲಿ ಖ್ಯಾತ ಸಾಮಾಜಿ-ಕ ಕಾರ್ಯಕರ್ತರು ಹಾಗೂ ರಾಜ-ಕೀಯ ಚಿಂತಕರಾದ ಶಿವಸುಂದರ್ ಅವರು ಭಾಗವಹಿಸಲಿದ್ದು, ವಿವಿಧ ಎಡಪಕ್ಷಗಳ, ಪ್ರಗತಿಪರ, ಜನಪರ ಸಂಘಟನೆಗಳ ಮುಖಂಡರು ಉಪಸ್ಥಿತ-ರಿರವರು. ಈ ಸಂವಾದ ಕಾರ್ಯಕ್ರಮಕ್ಕೆ ರೈತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನರು, ಮಹಿಳೆಯರು, ಆಗಮಿಸುವಂತೆ ಅವರು ಮನವಿ ಮಾಡಿದ್ದಾರೆ. ಈ ವೇಳೆ: ಹಿರಿಯ ಮುಖಂರಾದ ಡಿ.ಎಚ್. ಕಂಬಳಿ, ಲಿಂಗಪ್ಪ, ಶಂಕರ್ ಗುರಿಕಾರ, ಮೌನೇಶ ಜಾಲವಾಡಗಿ, ದವಲಸಾಬ್ ದೊಡ್ಮನಿ, ಸೇರಿದಂತೆ ಅನೇಕರಿದ್ದರು.

## ಮಸ್ಕಿ ಪೊಲೀಸ್ ಠಾಣೆಗೆ ನೂತನ ಪೊಲೀಸ್ ವರಿಷ್ಠಾಧಿಕಾರಿಗಳು ಬೇಟಿ

■ ನೈಜ್ಯ ದೇಸೆ ನ್ಯೂಸ್

**ಮಸ್ಕಿ: ಜ 10 ನೂತನ ರಾಯಚೂರು ಜಿಲ್ಲೆಯ ಪೊಲೀಸ್ ವರಿಷ್ಠಧಿಕಾರಿಗಳಾದ ಅರುಣವಂಶ ಗೀರಿ ಐಪಿಎಸ್ ಮಸ್ಕಿ ಪೊಲೀಸ್ ಠಾಣೆಗೆ ಭೇಟಿ ನೀಡಿ ವೀಕ್ಷಣೆ ಮಾಡಿದರು.**

ನಂತರ ಪಾಟೀಲ್ ನ್ಯೂಸ್ ಆಲರ್ಟ ಸುದ್ದಿಯೊಂದಿಗೆ ಮಾತನಾಡುತ್ತಾ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದು, ಕಾನೂನು ಸುವ್ಯವಸ್ಥೆ ಸರಿಯಾಗಿ ಕಾಪಾಡುವುದು, ಪೊಲೀಸ್ ಸಿಬ್ಬಂದಿಗಳು ಕರ್ತವ್ಯವನ್ನು ಸರಿಯಾಗಿ ಪಾಲಿನೆ ಮಾಡಿ ಠಾಣೆಯ ವ್ಯಾಪ್ತಿಯೊಳಗಡೆ ಆದ-'ಷ್ಟು ಅಹಿತಕರ ಘಟನೆಗಳಿಗೆ ಕಡಿವಾಣ ಹಾಕಬೇಕು, ಇತ್ತೀಚಿಗೆ ಮುಖ್ಯವಾಗಿ ಮೊಬೈಲ್ ಹಾಕಿಂಗ್ ಆಗಿ ಹಣ ಮತ್ತು ವೈಯಕ್ತಿಕ ದಾಖಲೆಗಳು ಸೈಬರ್ ಕ್ರೈಂ ಹೆಚ್ಚಾಗುತ್ತಿರುವ ಕಾರಣ ನಾಗರಿಕರು



ಮೊಬೈಲನ್ನ ಸರಿಯಾಗಿ ಬೆಳೆಸಿಕೊಳ್ಳಬೇಕು.

ಹಾಗೇನಾದರೂ ತೊಂದರೆ ಉಂಟಾದರೆ ತಕ್ಷಣವೇ ಪೊಲೀಸ್ ಇಲಾಖೆ ಗಮನಕ್ಕೆ ತರಬೇಕು ಹಾಗೂ ಇನ್ನಿತರ ವಿಷಗಳನ್ನು ಪಾಟೀಲ್ ನ್ಯೂಸ್ ಅಲರ್ಟ್ ಸುದ್ದಿಯೊಂದಿಗೆ ನೂತನ ಪೊಲೀಸ್ ವರಿಷ್ಠಾಧಿಕಾರಿ ಗಳಾದ ಅರುಣವಂಶಿ ಗಿರಿ ಐಪಿಎಸ್ ಮಾತನಾಡಿದರು, ಈ ಸಂದರ್ಭದಲ್ಲಿ ಲಿಂಗಸೂರ್ ಡಿವೈಎಸ್ಪಿ ದತ್ತಾತ್ರೇಯ ಕಾರ್ನಾಡ್, ಮಸ್ಕಿ ಸರ್ಕಲ್ ಇನ್ಸ್ಪೆಕ್ಟರ್ ರಾಮಣ್ಣ, ಪಿಎಸ್ಐ ರಂಗಯ್ಯ ಕೆ ಹಾಗೂ ಸಿಬ್ಬಂದಿ ವರ್ಗ ಇದ್ದರು.

# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೈಲಾಪುರದಲ್ಲಿ ಕಲಿಕಾ ಹಬ್ಬ ಅದ್ದೂರಿಯಾಗಿ ಆಚರಣೆ

■ ನೈಜ್ಯ ದೇಸೆ ನ್ಯೂಸ್

**ಮೈಲಾಪುರ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೈಲಾಪುರ ಶಾಲೆಯಲ್ಲಿ ಕಲಿಕಾ ಹಬ್ಬವನ್ನು ಅತ್ಯಂತ ಅದ್ದೂರಿಯಾಗಿ ಕುಂಭ ಕಳಸದೊಂದಿಗೆ ಆಚರಿಸಲಾಯಿತು ಈ ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಅಮರಯ್ಯ ಸ್ವಾಮಿ ಹಾಗೂ ಚಂದ್ರಶೇಖರ ಸ್ವಾಮಿ ವಹಿಸಿದ್ದರು ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ ತಂದೆ ರಾಮಯ್ಯ ಉದ್ಘಾಟಕರಾಗಿ ಶ್ರೀ ವೀರೇಶ್ ತಳವಾರ್ ಗ್ರಾಮ ಪಂಚಾಯತ್ ಅಧ್ಯಕ್ಷರು ಮೈಲಾಪುರ್ ನೆರವೇ-ರಿಸಿದರು. ಊರಿನ ಗಣ್ಯ ಮಾನ್ಯರು ಸಂಘದ ಅಧ್ಯಕ್ಷರು ನಿರ್ದೇಶಕರು ಹಾಗೂ ಶಿಕ್ಷಕರು ಭಾಗವಹಿಸಿದ್ದರು ಈ ದಿನ ಕಾರ್ಯಕ್ರಮದಲ್ಲಿ ದಾನಿಗಳಿಂದ ಉಚಿತವಾಗಿ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.**

ತಂದೆ ತಾಯಿ ಇಲ್ಲದ, ಮನೆ ಆಸ್ತಿ ಇಲ್ಲದ ಬಡ ಮಕ್ಕಳಿಗೆ ಒಂದು ವರ್ಷಕ್ಕೆ ಬೇಕಾಗುವಷ್ಟು ಕಲಿಕಾ ಸಾಮಗ್ರಿಗಳನ್ನು ಕೊಡುವುದರ ಮೂಲಕ ದಾನಿಗಳು ಆ ಮಕ್ಕಳನ್ನು ದತ್ತು ಪಡೆದರು ದಾನಿಗಳ ಸಹಾಯ ಸಹಕಾರದೊಂದಿಗೆ ಪ್ರೋತ್ಸಾಹಿಸಿ ಈ ಸಾರಿ 111



ಮಕ್ಕಳನ್ನು ದತ್ತು ಪಡೆದು ಮಾನವಿಯತೆನ್ನು ಮೆರೆದ ಮನುಕುಲದ ಮಹಾ ಪುಣ್ಯವಂತರು ಎಂದರೆ ತಪ್ಪಾಗಲಾರದು ಹಾಗೆ ದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು ದತ್ತು ಪಡೆದ ದಾನಿಗಳು ಸರ್ಕಾರಿ ಪ್ರೌಢಶಾಲೆ ಕಾರಟಗಿಯ 1990-1991ನೆಯ ಸಾಲಿನ ಹಳೆಯ ವಿದ್ಯಾರ್ಥಿಗಳ ಸಹಪಾಠಿಗಳ ಸ್ನೇಹ ಸಂಗಮ 91 ಗ್ರೂಪ್ ವತಿಯಿಂದ 42 ಮಕ್ಕಳು ಹಾಗೂ ಆಂಜನೇಯ ಮೂಲಿ ಮನೆ ಅವರ ಸ್ನೇಹಿತರಾದ ಶ್ರೀ ದೇವೇಂದ್ರಪ್ಪ ದೊಡ್ಡೋಡಿಗೆ ಎರಡು ಮಕ್ಕಳು ಡಾಕ್ಟರ್ ಭವಾನಿ ಪ್ರಸಾದ್ 2 ಮಕ್ಕಳು ಅಂಬಣ್ಣ ಸಾಲೋಣಿ ಎರಡು ಮಕ್ಕಳು ಪರಶುರಾಮ್ ಬಣ್ಣದ ಕೆ ಎಸ್ ಆರ್ ಟಿ ಸಿ ಕಾರಟಗಿ



ಎರಡು ಮಕ್ಕಳು ಇನ್ನುಳಿದ ಆತ್ಮೀಯರಾದ ಶ್ರೀ ನಿಂಗನಗೌಡ ನಾಡಗೌಡ್ರು 10 ಮಕ್ಕಳು ಶ್ರೀಮತಿ ಐಶ್ವರ್ಯ ಗಂಡ ದೊಡ್ಡ ಬಸವ 10 ಮಕ್ಕಳು ರಾಮಣ್ಣ ಕಾಮನೂರ್ ಐದು ಮಕ್ಕಳು ಮೈಲಾರಪ್ಪ ಸಮುದ್ರಿ ಐದು ಮಕ್ಕಳು ಶ್ರೀ ಉಮೇಶ್ ಉಪನ್ಯಾಸಕರು ಐದು ಮಕ್ಕಳು ಶ್ರೀ ಚನ್ನಬಸಪ್ಪ ಕುಷ್ಟಗಿ ಐದು ಮಕ್ಕಳು ಎಲ್ ಐ ಸಿ ಫ್ಯಾಕ್ಟ್ರಿ ಕಾರ್ಟಗಿ ಐದು ಮಕ್ಕಳು ಶ್ರೀಮತಿ ಶೋಭಾ ಹಿರೇಮಠ್ ಬೆಂಗಳೂರು ಐದು ಮಕ್ಕಳು ಶ್ರೀ ಶಿವಶರಣಯ್ಯ ಸ್ವಾಮಿ ಬೇವಿನಾಳ ನಾಲ್ಕು ಮಕ್ಕಳು ಶ್ರೀ ವೀರೇಶ್ ಗಾದಿಗನೂರ್ ಮೈಲಾಪುರ್ ಐದು ಮಕ್ಕಳು ಶ್ರೀಮತಿ ವಿಜಯಲಕ್ಷ್ಮಿ ಹಾದಿಮನಿ ಎರಡು ಮಕ್ಕಳು ಇಷ್ಟೆಲ್ಲಾ ದಾನಿಗಳು ಸರ್ಕಾರಿ ಶಾಲೆಯ ತಂದೆ ತಾಯಿ ಇಲ್ಲದ ತಬ್ಬಲಿ ಮಕ್ಕಳಿಗೆ ಮನೆ ಆಸ್ತಿ ಇಲ್ಲದ ಬಡ ಮಕ್ಕಳನ್ನು ದತ್ತು ಪಡೆದು ಕಲಿಕಾ ಸಾಮಗ್ರಿಗಳನ್ನು ನೀಡಿ ಪವಿತ್ರವಾದ ಪುಣ್ಯದ ಕೆಲಸವನ್ನು ಮಾಡಿದ್ದಾರೆ ಈ ಕೆಲಸದಿಂದ ಮೈಲಾಪುರದ ಜನತೆ ಶಿಕ್ಷಕರು ಪಾಲಕರು ಪೋಷಕರು ಮುದ್ದು ಮಕ್ಕಳು ಸಂತೋಷವನ್ನು ಹಂಚಿಕೊಂಡಿದ್ದಾರೆ.

ಹೀಗಾಗಿ ತಮಗೆ ಎಲ್ಲರ ಪರವಾಗಿ ಪ್ರೀತಿ ಹಾಗೂ ಗೌರವ ಪೂರ್ವಕವಾಗಿ ಅಭಿನಂದಿಸುತ್ತೇವೆ. ಮುಖ್ಯೋಪಾಧ್ಯಯರಾದ ತೋಟಯ್ಯ ಅಂಗಡಿ ಎಲ್ಲಾ ದಾನಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ದಾನಿಗಳನ್ನು ಶಾಲಾವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಶ್ರೀ ಆಂಜನೇಯ ಮೂಲಿ ಮನೆ. ಶ್ರೀ ಅಂಬಣ್ಣ ಸಾಲೋಣಿ.ಶ್ರೀ ನಿಂಗನಗೌಡ್ರು ನಾಡಗೌಡ್ರು .ಶ್ರೀನಿವಾಸ್ ಬುರುಗಪಲ್ಲಿ ಚಳ್ಳೂರ್ ಕ್ಯಾಂಪ್ .ಎಸ್‌ಎಂ ತಿಪ್ಪೇಸ್ವಾಮಿ ಕಾರ್ಟಗಿ .ಶ್ರೀ ಶರಣಬಸವ ಗುಂಜಳ್ಳಿ ಬೇವಿನಾಳ. ಎಲ್ಲಾ ದಾನಿಗಳಿಗೆ ಆ ಭಗವಂತ ಆಯುಷ್ಯ ಆರೋಗ್ಯ ಸರಿ ಸಂಪತ್ತನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

## ಸಾಹಿತ್ಯ ಸಿಂಚನ

ಜೀವಬಂಧುರ.!

ಮುಳುಗೇ ಹೋಯಿತು ಅನಿಸುವಷ್ಟರಲ್ಲಿ
ಪವಾಡ ಸದೃಶವಾಗಿ ನೌಕೆಯ ಮೇಲೆತ್ತಿ
ಭವಸಾಗರದಿ ತೇಲಿಸಿ ಕಾಪಿಡುವ ಶ್ರೀಕರ.!

ಬಾಡಿಯೇ ಹೋಯಿತು ಎನಿಸುವಷ್ಟರಲ್ಲಿ
ಯಾವುದೋ ಮಾಯೆಯಲಿ ಉಸಿರಿಟ್ಟು
ಜೀವಚೈತನ್ಯ ಚಿಗುರಿಸಿ ಪೊರೆವ ಶ್ರೀಧರ.!

ಬತ್ತಿಯೇ ಹೋಯಿತು ಅನಿಸುವಷ್ಟರಲ್ಲಿ
ಅನಿರೀಕ್ಷಿತ ಮಹಿಮೆಯಲಿ ಅಮೃತವಿಟ್ಟು
ಭಾವಜಲ ಉಕ್ಕಿಸಿ ಸಲಹುವ ಅಗೋಚರ.!

ಓ ನಿಂತೇ ಹೋಯಿತು ಎನಿಸುವಷ್ಟರಲ್ಲಿ
ನಿಗೂಢ ಜಾಡಿನಲಿ ಛಾವಿಯ ತಿರುವಿಟ್ಟು
ಬಾಳ ಚಲನಶೀಲವಾಗಿಸುವ ದಾಮೋದರ.!

ಆರಿಯೇ ಹೋಯಿತು ಅನಿಸುವಷ್ಟರಲ್ಲಿ
ಅನೂಹ್ಯ ಮೋಡಿಯಲಿ ಎಣ್ಣೆಬತ್ತಿಯಿಟ್ಟು
ಆತ್ಮಜ್ಯೋತಿ ಬೆಳಗಿ ಬೆಳಕಾಗಿಸುವ ನಗಧರ.!

ಹಾದಿಯೇ ಮುಗಿಯಿತು ಎನಿಸುವಷ್ಟರಲ್ಲಿ
ಊಹಾತೀತ ಲೀಲೆಯಲಿ ದಾರಿತಿರುವಿಟ್ಟು
ದಿಕ್ಕುದೆಸೆ ಬದಲಿಸಿ ದಾರಿತೋರುವ ಶಿಶಿರ.!

ಬಂಜರಾಯಿತು ಅಂದುಕೊಳ್ಳುವಷ್ಟರಲ್ಲಿ
ವಿಸ್ಮಯ ಗಾರುಡಿಯಲಿ ಹಚ್ಚಹಸಿರಿಟ್ಟು
ಒಡಲನೆಲ ಫಲವತ್ತಾಗಿಸುವ ನಂದಕಿಶೋರ!

ಸೋತಾಯಿತು ಎಂದುಕೊಳ್ಳುವಷ್ಟರಲ್ಲಿ
ಅಚ್ಚರಿಯಲಿ ಅದೃಶ್ಯನಾಗಿ ಆಸರೆಯಿಟ್ಟು
ಗೆಲುವಿನ ಪಥದಲಿ ಮುನ್ನಡೆಸುವ ಗಿರಿಧರ.!

ಭವಿಷ್ಯವಿನ್ನಿಲ್ಲವೆಂದು ಭಾವಿಸುವಷ್ಟರಲ್ಲಿ
ಬೆಳಕಾಗಿ ಬಂದು ಜಾತಕವಿಧಿಗಳ ಬದಿಗಿಟ್ಟು
ಬಾಳಭಾಷ್ಯ ಉಜ್ವಲವಾಗಿಸುವ ಚಕ್ರಧರ.!

ಬದುಕಿನ್ನಿಲ್ಲವೆಂದು ಬೋರಿಡುವಷ್ಟರಲ್ಲಿ
ಬೆಳದಿಂಗಳಾಗಿ ನಿಂದು ತಿಂಗಳ ಎದೆಗಿಟ್ಟು
ಕಂಗಳಕನಸ ಸಾಕಾರವಾಗಿಸುವ ಕರುಣಾಕರ.!

ಮುಗಿಲು ಕಡಲು ಒಡಲು ಎಲ್ಲೆಡೆಯಲ್ಲು
ಚಿತ್ತ ಚಿತ್ತಾರ ಚಮತ್ಕಾರಗಳ ಚೆಲುವಿಟ್ಟು
ಜಗದುಸಿರ ಝೇಂಕರಿಸುತಿಹ ಮುರಳೀಧರ.!

ಪ್ರತಿಕ್ಷಣ ಕ್ಷಣದಲ್ಲು ಪ್ರತಿಕಣ ಕಣದಲ್ಲು
ವ್ಯಕ್ತನಾಗಿ ಅವ್ಯಕ್ತನಾಗಿ ಕಾರುಣ್ಯ ನೆರವಿಟ್ಟು
ಚಿರಚಿರಂತನತೆ ಸಾಕ್ಷೀಕರಿಸಿಹ ಜೀವಬಂಧುರ.!

ಎ.ಎನ್.ರಮೇಶ್.ಗುಬ್ಬಿ.

# ರಾಮನಗೌಡ, ಶ್ರೀದೇವಿ ವೇಗದ ಓಟಗಾರರು

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಸಹಯೋಗದಲ್ಲಿ ನಡೆದ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ 100 ಮೀಟರ್ ಓಟದ ಸ್ಪರ್ಧೆಯಲ್ಲಿ ರಾಮನಗೌಡ ಹಾಗೂ ಶ್ರೀದೇವಿ ಅವರು ವೇಗದ ಓಟಗಾರರಾಗಿ ಹೊರ ಹೊಮ್ಮಿದರು. ಪುರಷರ ವಿಭಾಗದ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಮಸ್ಕಿ ಆರೋಗ್ಯ ಇಲಾಖೆಯ ರಾಮನಗೌಡ ಪ್ರಥಮ ಸ್ಥಾನ, ಮಸ್ಕಿ ಶಾಲಾ ಶಿಕ್ಷಣ ಇಲಾಖೆಯ ಬಸವರಾಜ ದ್ವಿತೀಯ ಸ್ಥಾನ ಹಾಗೂ ದೇವದುರ್ಗದ ಶಾಲಾ ಶಿಕ್ಷಣ ಇಲಾಖೆಯ ಸದ್ದಾಂ ಹುಸೇನ್ ತೃತೀಯ ಸ್ಥಾನ ಪಡೆದರು.**

ಮಹಿಳೆಯರ ವಿಭಾಗದಲ್ಲಿ ಮಸ್ಕಿ ಕಂದಾಯ ಇಲಾಖೆಯ ಶ್ರೀದೇವಿ ಪ್ರಥ-ಮ ಸ್ಥಾನ, ದೇವದುರ್ಗದ ಕಂದಾಯ ಇಲಾಖೆಯ ದೀಪಾ ದ್ವಿತೀಯ ಹಾಗೂ ದೇವದುರ್ಗದ ಆರೋಗ್ಯ ಇಲಾಖೆಯ ಹುಲಿಗೆಮ್ಮ ತೃತೀಯ ಸ್ಥಾನ ಪಡೆದರು. 200 ಮೀಟರ್ ಓಟ: ಸಿಂಧನೂರಿನ ಶಾಲಾ





ಶಿಕ್ಷಣ ಇಲಾಖೆಯ ಜಗದೀಶ ಪ್ರಥಮ ಸ್ಥಾನ, ಮಸ್ಕಿ ಆರೋಗ್ಯ ಇಲಾಖೆಯ ರಾಮನಗೌಡ ದ್ವಿತೀಯ ಸ್ಥಾನ, ಮಸ್ಕಿ ಶಾಲಾ ಶಿಕ್ಷಣ ಇಲಾಖೆಯ ಚಂದ್ರಶೇಖರ ತೃತೀಯ ಸ್ಥಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಮಸ್ಕಿ ಕಂದಾಯ ಇಲಾಖೆಯ ಶ್ರೀದೇವಿ ಪ್ರಥಮ ಸ್ಥಾನ, ದ್ವಿತೀಯ ಸ್ಥಾನ ದೇವದುರ್ಗದ ಕಂದಾಯ ಇಲಾಖೆಯ ದೀಪಾ, ತೃತೀಯ ಸ್ಥಾನ ಸಿಂಧನೂರಿನ ಸರ್ವೆ ಇಲಾಖೆಯ ನಾಗರತ್ನ ಪಡೆದುಕೊಂಡರು. 400 ಮೀಟರ್ ಓಟ: ಬಿಸಿಎಂ ಇಲಾಖೆಯ ರಮೇಶ ಪ್ರಥಮ ಸ್ಥಾನ, ಸಮಾಜ ಕಲ್ಯಾಣ ಇಲಾಖೆಯ ರಾಘವೇಂದ್ರ ದ್ವಿತೀಯ ಹಾಗೂ ಅಯ್ಯಪ್ಪ ತೃತೀಯ ಸ್ಥಾನ ಪಡೆದರು.

ಮಹಿಳಾ ವಿಭಾಗದಲ್ಲಿ ಮಾನವಿ ಶಾಲಾ ಶಿಕ್ಷಣ ಇಲಾಖೆಯ ಶಿವಲೀಲಾ ಪ್ರಥ-ಮ ಸ್ಥಾನ, ಸಿಂಧನೂರಿನ ಶಾಲಾ ಶಿಕ್ಷಣ ಇಲಾಖೆಯ ವಿದ್ಯೇಶ್ವರಿ ದ್ವಿತೀಯ ಸ್ಥಾನ, ಲಿಂಗಸೂಗೂರಿನ ಶಾಲಾ ಶಿಕ್ಷಣ ಇಲಾಖೆಯ ರೂಪಾ ತೃತೀಯ ಸ್ಥಾನ ಪಡೆದರು. 800 ಮೀಟರ್ ಓಟ: ಬಿಸಿಎಂ ಇಲಾಖೆಯ ರಮೇಶ ಪ್ರಥಮ ಸ್ಥಾನ, ನ್ಯಾಯಾಂಗ ಇಲಾಖೆಯ ಮಾರುತಿ ದ್ವಿತೀಯ ಸ್ಥಾನ ಹಾಗೂ ಆರೋಗ್ಯ ಇಲಾಖೆಯ ಚೇತನಕುಮಾರ ಅವರು ತೃತೀಯ ಪಡೆದರು. ಮಹಿಳೆಯರ ವಿಭಾಗದಲ್ಲಿ ರಾಯಚೂ-ರಿನ ಶಾಲಾ ಶಿಕ್ಷಣ ಇಲಾಖೆಯ ಜಯಲಕ್ಷ್ಮಿ ಪ್ರಥಮ, ದೇವದುರ್ಗದ ಕಂದಾಯ ಇಲಾಖೆಯ ಶ್ರೀದೇವಿ ದ್ವಿತೀಯ ಹಾಗೂ ದೇವದುರ್ಗದ ಆರೋಗ್ಯ ಇಲಾಖೆಯ ಚಾಂದಬೀಬಿ ತೃತೀಯ ಸ್ಥಾನ ಪಡೆದರು.

ರಾಯಚೂರಿನ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದ ಮಹಿಳೆಯರ ಕಬಡ್ಡಿ ಪಂದ್ಯದಲ್ಲಿ ಕ್ರೀಡಾಪಟುಗಳ ಸೆಣಸಾಟ ಉದ್ದ ಜಿಗಿತ: ಮಂಜುನಾಥ ಪ್ರಥಮ ಸ್ಪರ್ಧೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಮಂಜುನಾಥ ಪ್ರಥಮ ಸ್ಥಾನ ಬಿ.ಪ್ರಭು ದ್ವಿತೀಯ ಶಶಿಧರ ತೃತೀಯ ಸ್ಥಾನ ಪಡೆದರು. ಮಹಿಳೆಯರ ವಿಭಾಗದಲ್ಲಿ ಶಾಲಾ ಶಿಕ್ಷಣ ಇಲಾಖೆಯ ನೀಲಮ್ಮ ಪ್ರಥಮ ಸ್ಥಾನ ಸಿಂಧನೂರಿನ ಶಾಲಾ ಶಿಕ್ಷಣ ಇಲಾಖೆಯ ಮಂಜುಳಾ ದ್ವಿತೀಯ ಸ್ಥಾನ ದೇವದುರ್ಗದ ಶಾಲಾ ಶಿಕ್ಷಣ ಇಲಾಖೆಯ ಪದ್ಮಾವತಿ ತೃತೀಯ ಸ್ಥಾನ ಪಡೆದರು.

# ಸಹಕಾರಿ ಸಂಘದ ನೂತನ ಕಟ್ಟಡ ಉದ್ಘಾಟನಾ ಸಮಾರಂಭ



**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಪಟ್ಟಣದ ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ,ಇದರ ನೂತನ ಕಟ್ಟಡದ ಉದ್ಘಾಟನೆ ಜನವರಿ12 ರಂದು ನಡೆಯಲಿದೆ. ಅಂದು ಬೆಳಿಗ್ಗೆ 10-30 ಘಂಟೆಗೆ ಎಪಿಎಂಸಿ ಆವರಣದಲ್ಲಿರುವ ಸಂಘದ ನೂತನ ಕಟ್ಟಡದ ಉದ್ಘಾಟನೆ ಜರುಗುವುದು.**

ನಂತರ ಮು.11-00 ಘಂಟೆಗೆ ಸ್ಥಳೀಯ ಎಪಿಎಂಸಿ ಸಭಾಭವನದಲ್ಲಿ ಉದ್ಘಾಟನಾ ಸಮಾರಂಭ ಜರುಗಲಿದ್ದು ಇದರ ದಿವ್ಯ ಸಾನಿಧ್ಯವನ್ನು ವಿರಕ್ತಮಠ ಇಂಗಳೇಶ್ವರದ ಮ.ನಿ.ಪ್ರ.ಜಗದ್ಗುರು ಡಾ.ಸಿದ್ಧಲಿಂಗ ಸ್ವಾಮಿಗಳು ಹಾಗೂ ತಾಳಿಕೋಟಿ ಶ್ರೀ ಖಾಸ್ಗತೇಶ್ವರ ಮಠದ ಬಾಲ ಶಿವಯೋಗಿ ಶ್ರೀ ಸಿದ್ಧಲಿಂಗ ದೇವರು ವಹಿಸುವರು. ಜವಳಿ,ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ ನೂತನ ಕಟ್ಟಡ ಉದ್ಘಾಟಿಸುವರು. ಕೆ ಎಸ್ ಡಿ ಎಲ್ ಅಧ್ಯಕ್ಷ,ಶಾಸಕ ಅಪ್ಪಾಜಿ ನಾಡಗೌಡರು ಸೇಫ್ ಲಾಕರ್ ಉದ್ಘಾಟಿಸುವರು. ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಕಾಶೀನಾಥ ಎಸ್.ಮುರಾಳ ಅಧ್ಯಕ್ಷತೆ ವಹಿಸುವರು. ವಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ ಎಸ್ ಪಾಟೀಲ (ಯಾಳಗಿ) ಪ್ರಾಸ್ತಾವಿಕವಾಗಿ ಮಾತನಾಡುವರು.

ಮುಖ್ಯಅತಿಥಿಗಳಾಗಿ ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ,ಮಾಜಿ ಶಾಸಕರಾದ ಎ.ಎಸ್.ಪಾಟೀಲ (ನಡಹಳ್ಳಿ) , ಸೋಮನಗೌಡ ಪಾಟೀಲ ಸಾಸನೂರ, ಕ.ರಾ.ಸೌ.ಸಂ.ಸ.ನಿ. ಅಧ್ಯಕ್ಷ ಜಿ.ನಂಜನಗೌಡ ಸಿ.ಎ. ಕ.ರಾ.ಸೌ.ಸಂ.ಸ.ನಿ.ನಿರ್ದೇಶಕ ರಾಮನಗೌಡ ಬಿ.ಪಾಟೀಲ(ಯತ್ನಾಳ), ಸಹಕಾರ ಸಂಘಗಳ ಸಹಾಯಕ ನಿಬಂಧಕ ಚೇತನ್ ಭಾವಿಕಟ್ಟಿ ಆಗಮಿಸುವರು.ಸಹ ಅತಿಥಿಗಳಾಗಿ ಎಪಿಎಂಸಿ ಮಾಜಿ ಅಧ್ಯಕ್ಷರಾದ ಗುರು ತಾರನಾಳ, ಮಲ್ಲಣ್ಣ ಯಾತಗಿರಿ, ವಿ.ವಿ.ಸಂಘದ ಅಧ್ಯಕ್ಷ ವೀರಪಾಕ್ಷಯ್ಯ ಸಿ.ಹಿರೇಮಠ, ಸಹಕಾರಿ ಬ್ಯಾಂಕ್ ಅಧ್ಯಕ್ಷ ಕೆ.ಸಿ. ಸಜ್ಜನ, ಎಪಿಎಂಸಿ ಕಾರ್ಯದರ್ಶಿ ಆರ್ ಎಸ್ ರಾಠೋಡ ಆಗಮಿಸಲಿದ್ದು, ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿರುವರು ಎಂದು ಪ್ರಭಾರ ಮುಖ್ಯ ಕಾರ್ಯನಿರ್ವಾಹಕ ಮುತ್ತುಗೌಡ ಎಸ್.ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಡವಿಸಿದ್ದೇಶ್ವರ ಜಾತ್ರಾಗೆ ಬೆಂಚಮರಡಿ ಗ್ರಾಮಸ್ಥರಿಂದ 10,000 ಶೇಂಗಾ ಹೋಳಿಗೆ



**ನೈಜ್ಯ ದೆಸೆ ನ್ಯೂಸ್**

**ಹಾಲಾಪೂರ ಸಮೀಪದ ಉಟಕನೂರಿನ ಶ್ರೀ ಬಸವಲಿಂಗೇಶ್ವರ ದೇಶಿ ಕೇಂದ್ರ ಶಿವಯೋಗಿಗಳ 161ನೇ ಹಾಗೂ ಶ್ರೀ ಮರಿಬಸವಲಿಂಗೇಶ್ವರ ಮಹಾಸ್ವಾಮೀಜಿ 35 ನೇ ಪುಣ್ಯ ಸ್ಮರಣೆ ಅಂಗವಾಗಿ ನಡೆಯುವ ಜಾತ್ರೆಗೆ ಭಕ್ತರ ಸಾಗರವೇ ಹರಿದು ಉಟಕನೂರಿಗೆ ಆಗಮಿಸುವರು, ಅದಕ್ಕಾಗಿ ಮಹಾದಾಸೋಹ ಮೊದಲಿನಿಂದಲೂ ಪ್ರಸಿದ್ದಿ ಪಡೆದಿದೆ.**

ಈ ವರ್ಷ ಬೆಂಚಮರಡಿ ಸರ್ವಧರ್ಮ ಭಕ್ತಾದಿಗಳಿಂದ ಹತ್ತು ಸಾವಿರ ಶೇಂಗಾ ಹೋಳಿಗೆ ಮಾಡುವ ಮೂಲಕ ಭಕ್ತಿ ಮೆರೆದು, ಬೆಂಚಮರಡಿ ಗ್ರಾಮವನ್ನು ಪುನೀತಗೊಳಿಸಿದ್ದಾರೆ ಹೀಗಾಗಿ ಈ ವರ್ಷ ಶ್ರೀ ಮಠದಲ್ಲಿ ನಡೆಯುವ ಜಾತ್ರೆಗೆ ಮನಪೂರ್ವಕವಾಗಿ ಅನೇಕ ಗ್ರಾಮಗಳಿಂದ ಭಕ್ತಾದಿಗಳು ತರ ತರಹದ ಪ್ರಸಾದ್ ವ್ಯವಸ್ಥೆ ಮಾಡಿಕೊಂಡು ಶ್ರೀ ಅಡಿವಿಸಿದ್ದೇಶ್ವರ ಸುಕ್ಷೇತ್ರದಲ್ಲಿ ನಡೆಯುವ ಜಾತ್ರೆಗೆ ಬರುವ ಭಕ್ತರಿಗೆ ಸಿಹಿ ಪದಾರ್ಥ ಅನ್ನು ಸವಿಯುವ ಗಳಿಗೆಗೆ ಸಾಕ್ಷಿಯಾಗಿದ್ದು ವಿಶೇಷವಾಗಿದೆ ಎಂದೂ ಬೆಂಚಮರಡಿ ಗ್ರಾಮದ ಭಕ್ತಾರಾದ ಶ್ರೀ ಮಲ್ಲಯ್ಯ ಸ್ವಾಮಿ ಅವರು ಪಾಟೀಲ್ ನ್ಯೂಸ್ ಅಲರ್ಟ್ ಸುದ್ದಿಯೊಂದಿಗೆ ಮಾತನಾಡಿದರು.

ನಂತರ ಶ್ರೀ ಮಠದ ಪೂಜ್ಯರಾದ ಶ್ರೀ ಮರಿಬಸವರಾಜ ದೇಶಿಕೇಂದ್ರ ಶಿವಯೋಗಿಗಳು ಮಾತನಾಡಿ ಶ್ರೀಮಠದಲ್ಲಿ ನಡೆಯುವ ಜಾತ್ರೆಗೆ ಬೆಂಚಮರಡಿ ಹಾಗೂ ಅನೇಕ ಗ್ರಾಮಗಳಿಂದ ಸರ್ವಧರ್ಮ ಭಕ್ತಾದಿಗಳು ಶೇಂಗಾ ಹೋಳಿಗೆ ಮತ್ತಿತರ ಸಿಹಿ ಪದಾರ್ಥಗಳನ್ನು ಸೊ ಇಚ್ಛೆಯಿಂದ ಮಹಾಪ್ರಸಾದ ವ್ಯವಸ್ಥೆ ಮಾಡಿದ್ದು ಸಂತೋಷದ ವಿಚಾರ, ಎಲ್ಲಾ ಭಕ್ತಾದಿಗಳಿಗೆ ಮತ್ತಷ್ಟು ಭಗವಂತ ಉತ್ತಮ ಆರೋಗ್ಯ, ಮಳೆ ಬೆಳೆ ಕೊಟ್ಟು ಕಾಪಾಡಲಿ ಎಂದು ಆಶೀರ್ವದಿಸಿದರು.

## ಉಟಕನೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಯಿಂದ ಸ್ವಚ್ಚತೆ ಕಾರ್ಯ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ತಾಲೂಕಿನ ಉಟಕನೂರು ಗ್ರಾಮದಲ್ಲಿ ಉಟಕನೂರು ಶ್ರೀ ಆಡವಿಸಿದ್ದೇಶ್ವರ ಸುಕ್ಷೇತ್ರದ ಶ್ರೀ ಮರೀಬಸವಲಿಂಗ ದೇಸಿಕೇಂದ್ರ ಶಿವಯೋಗಿಗಳ ಜಾತ್ರಮಹೋತ್ಸವದ ಅಂಗವಾಗಿ ಉಟಕನೂರು ಗ್ರಾಮ ಪಂಚಾಯಿತಿ ವತಿಯಿಂದ ಉಟಕನೂರು ಗ್ರಾಮದಲ್ಲಿ ಚರಂಡಿಗಳ ಸ್ವಚ್ಚತೆ, ಹಾಗೂ ಬೀದಿ ದೀಪಗಳ ದುರಸ್ತಿ ಸೇರಿದಂತೆ ಗ್ರಾಮದಲ್ಲಿ ಸ್ವಚ್ಚತೆ ಕೈಗೋಳಲಾಯಿತು**



ಗ್ರಾ.ಪಂ. ಅಭಿವೃದ್ದಿಆಧಿಕಾರಿ ಜುಬೇರನಾಯಕ್ ಮಾತನಾಡಿ ಗ್ರಾಮದಲ್ಲಿನ ಚರಂಡಿಗಳಲ್ಲಿ ನಿಂತಿರುವ ನೀರಿನಿಂದಾಗಿ ಮಲೇ-ರಿಯಾ,ಡೆಂಗ್ಯೂ,ಚಿಕನ್ ಗೂನ್ಯ, ಸೇರಿದಂತೆ ಸೊಳ್ಳೆಗಳಿಂದ ಹರಡುವ ಕಾಯಿಲೆಗಳು ಹರಡದಂತೆ ಇಂದು ಚರಂಡಿಗಳನ್ನು ಸ್ವಚ್ಚಗೊಳಿಸಿ ಬ್ಲಿಚಿಂಗ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಪ.ಪಂ ಅಧ್ಯಕ್ಷ ಸ್ಥಾನಕ್ಕೆ 20ರಂದು ಚುನಾವಣೆ

**ನೈಜ್ಯ ದೆಸೆ ನ್ಯೂಸ್**

**ಸಿರವಾರ: ರಾಜೀನಾಮೆಯಿಂದ ತೆರವಾದ ಇಲ್ಲಿಯ ಪಟ್ಟಣ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಜನವರಿ 20ರಂದು ಚುನಾವಣೆ ನಿಗದಿಯಾಗಿದ್ದು, ಆಕಾಂಕ್ಷಿಗಳ ನಡುವೆ ಪೈಪೋಟಿ ತೀವ್ರಗೊಂಡಿದೆ. 20 ಸದಸ್ಯರ ಸಂಖ್ಯಾ ಬಲದ ಪಟ್ಟಣ ಪಂಚಾಯಿತಿಯಲ್ಲಿ 20 ಜನ ಸದಸ್ಯರಲ್ಲಿ 9 ಕಾಂಗ್ರೆಸ್ ಬೆಂಬಲಿತ, 6 ಬಿಜೆಪಿ, ಜೆಡಿಎಸ್ 3 ಹಾಗೂ ಇಬ್ಬರು ಪಕ್ಷೇತರ ಸದಸ್ಯರು ಇದ್ದಾರೆ. ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವ ಅಧ್ಯಕ್ಷ ಸ್ಥಾನಕ್ಕೆ ಮೊದಲ ಅವಧಿಗೆ ವೈ.ಭೂಪನಗೌಡ ಟಾಸ್ ಮೂಲಕ ಅಧ್ಯಕ್ಷರಾಗಿದ್ದರು.**




ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಹಾಲಿ ಅಧ್ಯಕ್ಷ ವೈ.ಭೂಪನಗೌಡ ಅವರು ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿದ್ದಾರೆ. ಮೊದಲ ಅವಧಿಯ ಇನ್ನುಳಿದ 15 ತಿಂಗಳ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಬೆಂಬಲಿತರ ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ. ಕಾಂಗ್ರೆಸ್‌ನಿಂದ ಹಸೇನ ಅಲಿಸಾಬ, ಹಾಜಿಚೌದ್ರಿ, ಸೂರಿ ದುರುಗಣ್ಣ ನಾಯಕ, ಮೌಲಾಸಾಬ ವರ್ಚಸ್ ಅವರು ಹೈಕಮಾಂಡ್ ಮನವೊಲಿಸಲು ಮುಂದಾಗಿದ್ದಾರೆ. 12ನೇ ವಾರ್ಡ್‌ಗೆ ನಡೆದಿದ್ದ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಜ್ಯೋತಿ ದಾನನಗೌಡ ಅವರಿಗೆ ಹೈಕಮಾಂಡ್ ಮಣೆ ಹಾಕಿದರೆ ಅಚ್ಚರಿ ಪಡಬೇಕಾಗಿಲ್ಲ.

ಬಿಜೆಪಿಯಿಂದಲೂ ಕೃಷ್ಣ ನಾಯಕ ಮತ್ತು ಸಂದೀಪ ಪಾಟೀಲ ಆಕಾಂಕ್ಷಿಗಳಾಗಿದ್ದು, ಪಕ್ಷೇತರರ ಬೆಂಬಲದೊಂದಿಗೆ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ. ಅಧ್ಯಕ್ಷರ ಚುನಾವಣೆಗೆ 20 ಸದಸ್ಯರು, ಸಂಸದ, ಶಾಸಕ ಸೇರಿದಂತೆ 22 ಮತದಾರರಿದ್ದು, ಇಬ್ಬರು ಪಕ್ಷೇತರರೇ ನಿರ್ಣಾಕವಾಗಲಿದ್ದಾರೆ. ಕಾಂಗ್ರೆಸ್ 9 +2 ಒಟ್ಟು 11, ಬಿಜೆಪಿ-ಜೆಡಿ-ಎಸ್ ಮೈತ್ರಿಯಿಂದ 6+3=9 ಮತ್ತು ಇಬ್ಬರು ಪಕ್ಷೇತರರು ಸೇರಿ 11 ಆಗಲಿದ್ದು, ಇದೇ ರೀತಿ ಬೆಂಬಲ ವ್ಯಕ್ತವಾದರೆ ಅತೃಪ್ತ ಆಕಾಂಕ್ಷಿಗಳ ಬೆಂಬಲದಿಂದ ಅಧ್ಯಕ್ಷರಾಗುವ ತವಕದಲ್ಲಿದ್ದಾರೆ.

# ರಸ್ತೆ ಸುರಕ್ಷತಾ ನಿಯಮ ಪಾಲಿಸಿ: ಜಿಲ್ಲಾಧಿಕಾರಿ ಸಂಗಪ್ಪ ಸೂಚನೆ

**ನೈಜ್ಯ ದೆಸೆ ನ್ಯೂಸ್**

**ಬಾಗಲಕೋಟೆ: ವಾಹನ ಚಾಲಕರು ರಸ್ತೆ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಾಹನ ಚಾಲಕರು ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸದೇ, ಸುರಕ್ಷಿತವಾಗಿ ವಾಹನ ಚಾಲನೆ ಮಾಡಿದಲ್ಲಿ ಅಮೂಲ್ಯ ಜೀವಗಳ ರಕ್ಷಣೆ ಮಾಡಲು ಸಾಧ್ಯವಾಗುತ್ತದೆ ಎಂದರು.**

ವಾಯವ್ಯ ಸಾರಿಗೆ ಸಂಸ್ಥೆಗಳ ಬಸ್ ಚಾಲಕರು ನಿಲುಗಡೆ ಸ್ಥಳಗಳಲ್ಲಿಯೇ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಬೇಕು. ಕಬ್ಬಿನ ಕಾರ್ಖಾನೆ ಮಾಲಿಕರು ಕೂಡ ತಮ್ಮ ಕಾರ್ಖಾನೆಗಳಿಗೆ



ಬರುವ ಟ್ರ್ಯಾಕ್ಟರ್ ಮತ್ತು ಎತ್ತಿನ ಬಂಡಿಗಳು ರಸ್ತೆ ಬದಿ ಅಥವಾ ನಡು ರಸ್ತೆಯಲ್ಲಿ ನಿಲ್ಲಿಸದ ರೀತಿಯಲ್ಲಿ ಕ್ರಮಕೈಗೊಳ್ಳಬೇಕು ಎಂದು ಹೇಳಿದರು. ವಿಮೆ ಮಾಡಿಸಿರುವ ಟ್ರ್ಯಾಕ್ಟರ್‌ಗಳಿಗೆ ಮಾತ್ರ ಒಳಗಡೆ ಪ್ರವೇಶ ಎಂಬ ನಿಯಮ ಪಾಲಿಸಿದಲ್ಲಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ಪರಿಹಾರ ಪಡೆಯಲು ಸಾಧ್ಯವಾಗುತ್ತದೆ. ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಲು ಸಕ್ಕರೆ ಕಾರ್ಖಾನೆಯವರು, ವಿವಿಧ ಇಲಾಖೆ ಅಧಿಕಾರಿ ಸಿಬ್ಬಂದಿ ಎಲ್ಲರೂ ಒಗ್ಗೂಡಿ ಕಾರ್ಯನಿರ್ವಹಿಸಬೇಕು ಎಂದರು.

ಪುರಸಭೆ, ನಗರಸಭೆ, ಸ್ಥಳಿಯ ಪ್ರಾಧಿಕಾರದ ಅಧಿಕಾರಿಗಳು ಚರಂಡಿ, ಒಳಚರಂಡಿ, ನಳಗಳ ಸಂಪರ್ಕ ಕಾಮಗಾರಿಗಳಿಗಾಗಿ ರಸ್ತೆ ಅಗೆದಿದ್ದಲ್ಲಿ, ಅವುಗಳನ್ನು ಮೊದಲಿನಂತೆ ಸರಿಪಡಿಸಬೇಕು. ಅಂತಹ ಕಾಮಗಾರಿಗಳಿಂದಾಗಿ ಅಪಘಾತ ಸಂಭವಿಸಿ ಜೀವ ಹಾನಿಯಾದಲ್ಲಿ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಧಿಕಾರಿ ಪ್ರಸನ್ನ ದೇಸಾಯಿ ಮಾತನಾಡಿ, ರಸ್ತೆ ಸುರಕ್ಷತೆಯ ನಿಯಮಗಳನ್ನು ಪಾಲಿಸಿ ಎಂದು ಹೇಳುವುದು ಕೇವಲ ಪೊಲೀಸ್ ಇಲಾಖೆಯದ್ದು ಮಾತ್ರವಲ್ಲ, ಎಲ್ಲ ಇಲಾಖೆಗಳು ಮಾಡಬೇಕಾಗುತ್ತದೆ. ರಸ್ತೆ ಸುರಕ್ಷತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು. ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ಗಂಟೆಯ ರಸ್ತೆ ಸುರಕ್ಷತಾ ನಿಯಮ ಪಾಲಿಸುವ ಕುರಿತು ಹದಿನೈದು ದಿನಕೊಮ್ಮೆಯಾದರೂ ಪಾಠ ಬೋಧಿಸಬೇಕು ವಿದ್ಯಾರ್ಥಿಗಳಿಗೆ ಮನವ-ರಿಕೆಯಾಗುತ್ತದೆ. ಆ ಮಕ್ಕಳು ಮನೆಯ ಸದಸ್ಯರು ಹಾಗೂ ಪಾಲಕರಿಗೆ ಹೇಳಿದರೆ ಎಲ್ಲ-ರಿಗೂ ಅರಿವು ಮೂಡುತ್ತದೆ ಎಂದು ಹೇಳಿದರು. ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ಕೆ.ದುರ್ಗಾದಾಸ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮಂಜುನಾಥ ಇದ್ದರು.

## ನೇಮಕಾತಿ ಪ್ರಕಟಣೆ

ಚಿತ್ರದುರ್ಗ ಗ್ರಾಮ ಪಂಚಾಯತ್ ನೇಮಕಾತಿ 2026 ಬಿಲ್ ಕಲೆಕ್ಟರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಚಿತ್ರದುರ್ಗ ಗ್ರಾಮ ಪಂಚಾಯತ್ ನೇಮಕಾತಿ 2026: 9 ಬಿಲ್ ಕಲೆಕ್ಟರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಚಿತ್ರದುರ್ಗ ಗ್ರಾಮ ಪಂಚಾಯತ್ ಜನವರಿ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಬಿಲ್ ಕಲೆಕ್ಟರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಚಿತ್ರದುರ್ಗ-ಕರ್ನಾಟಕದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 08-ಫೆಬ್ರವರಿ-2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 09-01-2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08-ಫೆಬ್ರವರಿ-2026 ಅಧಿಕೃತ ವೆಬ್‌ಸೈಟ್: chitradurga.nic.in

## ಕಾಯಕ ಯೋಗಿಯಾದ ಗವಿಶ್ರೀ

■ ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ನಗರದ ಗವಿಸಿದ್ಧೇಶ್ವರ ಜಾತ್ರೆ ಅಂಗವಾಗಿ ಶನಿವಾರ ರಜಾ ಹಿನ್ನೆಲೆ ಅಪಾರ ಭಕ್ತರು ಮಠದತ್ತ ಆಗಮಿಸಿ ಗವಿಸಿದ್ಧೇಶನ ದರ್ಶನ ಪಡೆದು ಪುನೀತರಾದರು. ಜ.5ರಿಂದ ಮೂರು ದಿನಗಳ ಕಾಲ ಧಾರ್ಮಿಕ ಕಾರ್ಯಕ್ರಮಗಳು ನಡೆದಿವೆ. ಗುರುವಾರ ಹಾಗೂ ಶುಕ್ರವಾರ ಕೊಂಚ ಜನ ಸಂದಣಿ ತಗ್ಗಿತ್ತು.**



ಎರಡನೇ ಶನಿವಾರ ಹಿನ್ನೆಲೆಯಲ್ಲಿ ಬೆಳಗ್ಗಿನಿಂದಲೇ ಜನರು ಜಾತ್ರೆಗೆ ಆಗಮಿಸಿದರು. ಇದ-ರಿಂದ ನಗರಾದ್ಯಂತ ಟ್ರಾಫಿಕ್ ಸಮಸ್ಯೆ ಹೆಚ್ಚಿತು. ಬಸವೇಶ್ವರ ವೃತ್ತ, ಅಶೋಕ ವೃತ್ತದಿಂದ ಹಿಡಿದು ಬಸ್ ನಿಲ್ದಾಣವರೆಗೂ ವಾಹನ ದಟ್ಟಣೆ ಕಂಡು ಬಂತು. ಗ್ರಾಮೀಣ ಭಾಗದ ಜನರು ಟ್ರ್ಯಾಕ್ಟರ್, ಬಂಡಿಗಳಲ್ಲಿ ಜಾತ್ರೆಗೆ ಬಂದರು. ಜನರು ಹೆಚ್ಚಿದ ಹಿನ್ನೆಲೆ ಮಹಾ ದಾಸೋಹ ಭವನದಲ್ಲೂ ಕಿಕ್ಕಿರಿದು ಜನ ಸೇರಿದರು. ಮಾದಲಿ, ರೊಟ್ಟಿ, ಪಲ್ಯ, ಅನ್ನ&ಸಾಂಬಾರ್, ರವೆ ಉಂಡಿ, ಪುಡಿ, ಚಟ್ನಿ, ಉಪ್ಪಿನ ಕಾಯಿ ರುಚಿ ಸವಿದರು. ಅಧಿಕಾರಿ ವರ್ಗ, ಶಾಲಾ-ಕಾಲೇಜು ಮಕ್ಕಳು, ಮಹಿಳೆಯರು, ವೃದ್ಧರು ಸೇರಿ ಎಲ್ಲ ವರ್ಗದ ಜನರು ಬಂದರು. ಗವಿಸಿದ್ಧೇಶ್ವರ ಕತೃ ಗದ್ದುಗೆ, ಅಭಿನವ ಗವಿಶ್ರೀಗಳ ದರ್ಶನ ಪಡೆದರು. ಭಕ್ತರು ಹೆಚ್ಚಿದ್ದ-ರಿಂದ ದರ್ಶನಕ್ಕೆ ಬಹುದೂರದವರೆಗೆ ಸರತಿ ಕಂಡುಬಂತು. ಸೇವೆಗೈದ ಗವಿಶ್ರೀ ಧಾರ್ಮಿಕ ಕಾರ್ಯಕ್ರಮಗಳು ಮುಗಿದ ಹಿನ್ನೆಲೆಯಲ್ಲಿ ಸದ್ಯ ಮಹಾ ದಾಸೋಹ ಮುಂದುವರೆದಿದೆ. ಸದಾ ಚಟುವಟಿಕೆಯಿಂದ ಇರುವ ಅಭಿನವ ಗವಿಶ್ರೀಗಳು ಶನಿವಾರ ಮಹಾದಾಸೋಹದಲ್ಲಿ ಕೆಲ ಗಂಟೆಗಳ ಕಾಲ ಸೇವೆ ಸಲ್ಲಿಸಿದರು. ಅಕ್ಕಿ ಚೀಲ ಹೊತ್ತರು. ಅಡುಗೆ ಮಾಡಿದರು. ಭಕ್ತ-ರಿಗೆ ಪ್ರೀತಿಯಿಂದ ಪ್ರಸಾದ ಉಣಬಡಿಸಿದರು. ದರ್ಶನಕ್ಕೆ ಬಂದ ಚಿಕ್ಕ ಮಕ್ಕಳನ್ನು ಎತ್ತಿ ಮುದ್ದಾಡಿದರು. ಸೇವಾ ಕಾರ್ಯದಲ್ಲಿದ್ದ ಶಾಲಾ ಮಕ್ಕಳನ್ನು ತಬ್ಬಿ ಮುದ್ದಾಡಿ ಪ್ರೋತ್ಸಾಹಿಸಿದರು.

## ಹಿಪ್ಪರಗಿ ಬ್ಯಾರೇಜ್ ಗೇಟ್ ದುರಸ್ತಿ

■ ನೈಜ್ಯ ದೆಸೆ ನ್ಯೂಸ್

**ಹಿಪ್ಪರಗಿ ಬ್ಯಾರೇಜ್‌ನ 22 ನೇ ಈಚೆಗೆ ಮುರಿದಿದ್ದ ಗೇಟ್ ಅನ್ನು ಶುಕ್ರವಾರ ಬೆಳಗಿನ ಜಾವ 5 ಗಂಟೆಗೆ ಅಳವಡಿಸಲಾಯಿತು. ಮಂಗಳವಾರ ಮಧ್ಯಾಹ್ನ ಜಲಾಶಯದಲ್ಲಿ 5.2 ಟಿಎಂಸಿ ಅಡಿ ನೀರಿನ ಸಂಗ್ರಹವಿತ್ತು.**



ಶುಕ್ರವಾರ ಬೆಳಗಿನ ಜಾವ ಗೇಟ್ ಅಳವಡಿಸಿದ ನಂತರ ಬ್ಯಾರೇಜ್‌ನಲ್ಲಿ 3.66 ಟಿಎಂಸಿ ಅಡಿ ನೀರಿನ ಸಂಗ್ರಹವಿದ್ದು, ಜಲಾಶಯದಿಂದ 2.34 ಟಿಎಂಸಿ ಅಡಿ ನೀರು ಹರಿದು ಹೋಗಿದೆ. ಸದ್ಯ ಕೃಷ್ಣಾ ನದಿಗೆ ಜಿಎಲ್‌ಬಿಸಿ ಕಾಲುವೆಯ ಮೂಲಕ ನೀರು ಹರಿದು ಬರುತ್ತಿದೆ ಎಂದು ಬ್ಯಾರೇಜ್‌ನ ಎಇಇ ಶಿವಮೂರ್ತಿ ತಿಳಿಸಿದರು.

## ವಿದ್ಯಾರ್ಥಿನಿಯ ಪತ್ತೆಗಾಗಿ ಸಹಕರಿಸಿ ಕಾಲೇಜಿಗೆ ಹೋದ ವಿದ್ಯಾರ್ಥಿನಿ ಕಾಣೆ, ಪ್ರಕರಣ ದಾಖಲು

■ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜ 11 . ಕಳಾಪುರ ಗ್ರಾಮದ ಅಮರೇಶ್ ತಂದೆ ವೀರಭದ್ರಪ್ಪ ಹೊಸಗೌಡ ಇವರ ಮಗಳಾದ ಮೇಘಶ್ರೀ ಎಂದಿನಂತೆ ಬೆಳಗ್ಗೆ ತಾನು ಓದುತ್ತಿರುವ ಜಿಟಿಟಿಸಿ ಕಾಲೇಜಿಗೆ ಹೋಗಿ ಬರುವುದಾಗಿ ಹೇಳಿ ಕಾಲೇಜಿನ ಸಮವಸ್ತ್ರವನ್ನು ಧರಿಸಿ ವಿದ್ಯಾರ್ಥಿನಿ ಬಸ್ ನ್ನು ಹತ್ತಿ ತಾನು ಓದುವ ಕಾಲೇಜಿಗೆ ಹೋಗಿದ್ದಾಳೆ ಆದರೆ ಸಂಜೆ ವೇಳೆಗೆ ಮನೆಗೆ ಬಾರದನ್ನು ಕಂಡು ಪೋಷಕರು ಹುಡುಕಾಡಿದರು ಸಿಗದೇ ಇದ್ದುದ್ದ-ರಿಂದ ಲಿಂಗಸಗೂರು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದಾರೆ.**



ಕಾಣೆಯಾದ ವಿದ್ಯಾರ್ಥಿನಿಯ ಚಹಾರೆ ತೆಳ್ಳನೆಯ ಮೈಕಟ್ಟು ಗೋದಿ ಮೈಬಣ್ಣ, 5 ಪೀಟ್ ಎತ್ತರ, ಹಳದಿ ಕಾಲರ್ ಅರ್ದ ತೋಳಿನ ಶರ್ಟ, ಚಾಕಲೇಟ್ ಕಲರ್ ಪ್ಯಾಂಟ್ ಧರಿಸಿದ್ದಾರೆಂದು ಪೋಷಕರ ದೂ-ರಿನ ಮೇರೆಗೆ ಪೊಲೀಸ್ ಠಾಣೆ ಗುನ್ನೇ ನಂಬರ್ 07/2026 ಕಾಲಂ ವಿದ್ಯಾರ್ಥಿನಿಯ ಕಾಣೆಯಾದ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ. ಈ ವಿದ್ಯಾರ್ಥಿನಿಯ ಸುಳಿವು ಯಾರಿಗಾದರೂ ಕಂಡು ಬಂದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ತಿಳಿಸಿದ್ದಾರೆ.

# ಮಂತ್ರಾಲಯದ ಶ್ರೀ ರಾಘವೇಂದ್ರ ತೀರ್ಥ ಶ್ರೀ ಪಾದಂಗಳವರ ಸನ್ನಿಧಾನಕ್ಕೆ ಪಾದಯಾತ್ರೆ

■ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಶ್ರೀ ನಗರೇಶ್ವರ ಶ್ರೀ ವಾಸವಿ ಕನ್ನಿಕಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಶ್ರೀ ನಗರೇಶ್ವರ ಅರ್ಯ ವೈಶ್ಯಸಂಘ ಮಾನ್ವಿ ವತಿಯಿಂದ ಅಯೋಜಿಸಲಾದ ಮಂತ್ರಾಲಯದ ಶ್ರೀ ರಾಘವೇಂದ್ರ ತೀರ್ಥ ಶ್ರೀ ಪಾದಂಗಳವರ ಸನ್ನಿಧಾನಕ್ಕೆ ಪಾದಯಾತ್ರೆ ಅಂಗವಾಗಿ ಶ್ರೀನಗರೇಶ್ವರ ಸ್ವಾಮಿಗೆ ವಿಶೇಷ ಪೂಜೆ. ಮಹಾಮಂಗಳಾರತಿ, ಗೋಪೂಜೆ ಸಲ್ಲಿಸಲಾಯಿತು.**



ನಂತರ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳಿಂದ ಮಂತ್ರಾಲಯ ಪಾದಯಾತ್ರೆಗೆ ಚಾಲನೆ ನೀಡಿ ಆರ್ಶೀವಾಚನ ನೀಡಿ ತುಂಗಭದ್ರ ನದಿ ತೀರದಲ್ಲಿನ ಪುಣ್ಯಕ್ಷೇತ್ರವಾಗಿರುವ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳು ಸಾಶಾರೀರರಾಗಿ ವೃಂದವನವನ್ನು ಪ್ರವೇಶಮಾಡಿ ಇಂದಿಗೂ ಕೂಡ ನಿತ್ಯ ಮಂತ್ರಾಲಯದ ಶ್ರೀ ರಾಘವೇಂದ್ರ ಯತಿಗಳ ವೃಂದವನ ದರ್ಶನಕ್ಕೆ ಬರುವ ಭಕ್ತ-ರಿಗೆ ಶ್ರೀ ರಾಘವೇಂದ್ರಸ್ವಾಮಿಗಳು ಅನುಗ್ರಹವನ್ನು ನೀಡುತ್ತಿದ್ದಾರೆ ಮಾನ್ವಿಯ ಶ್ರೀ ನಗರೇಶ್ವರ ಅರ್ಯ ವೈಶ್ಯಸಂಘ ಮಾನ್ವಿ ವತಿಯಿಂದ 2ನೇ ವರ್ಷದ ಪಾದಯಾತ್ರೆಗೆ ಎಲ್ಲಾ ಸಮುದಾಯದ ಭಕ್ತರಿಗೆ ಅವಕಾಶ ಮಾಡಿಕೊಟ್ಟಿರುವುದ-ರಿಂದ ಸಮುದಾಯಗಳ ನಡುವೆ ಸೌಹಾರ್ಧತೆ ಹಾಗೂ ಭವೈಕ್ಯತೆ, ವಿಶ್ವಾಸ ಮೂಡುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ಅನುಗ್ರಹ ಸಂದೇಶವನ್ನು ನೀಡಿದರು.

ಶ್ರೀ ನಗರೇಶ್ವರ ಅರ್ಯ ವೈಶ್ಯಸಂಘ ಮಾನ್ವಿ ತಾ.ಅಧ್ಯಕ್ಷರಾದ ಆರ್.ಮುತ್ತುರಾಜ ಶೆಟ್ಟಿ ,ಕಾರ್ಯದರ್ಶಿ ಬಿಚ್ಚಾಲಿ ಈರಣ್ಣ ಶೆಟ್ಟಿ , ಪುರಸಭೆ ಹಿರಿಯ ಸದಸ್ಯರಾದ ರಾಜಾ ಮಹೇಂದ್ರನಾಯಕ ಸೇರಿದಂತೆ 700ಕ್ಕೂ ಹೆಚ್ಚು ಸರ್ವ ಸಮುದಾಯಗಳ ಪಾದಯಾತ್ರಿಗಳು ಭಾಗವಹಿಸಿದರು. ಮಾನ್ವಿ: ಪಟ್ಟಣದ ಶ್ರೀ ನಗರೇಶ್ವರ ಶ್ರೀ ವಾಸವಿ ಕನ್ನಿಕಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಪಾದಯಾತ್ರೆಗೆ ಚಾಲನೆ ನೀಡಿದರು.

# ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮ ದಡಿಯಲ್ಲಿ ಹೋಲಿಗೆ ತರಬೇತಿ: ಸುನಿತಾ ಪ್ರಭು




■ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಪೋತ್ನಾಳ್ ಗ್ರಾಮದ ವಾಲ್ಮೀಕಿ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ನ ಮಾನ್ವಿ ಯೋಜನಾ ಕಚೇರಿ ವತಿಯಿಂದ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮ ದಡಿಯಲ್ಲಿ ನಡೆದ ಹೊಲಿಗೆ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ತಾ. ಯೋಜನಾಧಿಕಾರಿಗಳಾದ ಸುನಿತಾ ಪ್ರಭು ಚಾಲನೆ ನೀಡಿ ಮಾತನಾಡಿ.**

ಸಂಘದ ಮಹಿಳ ಸದಸ್ಯರು ಉಳಿತಾಯದ ಜೋತೆಗೆ ಸ್ವ ಉದ್ಯೋಗವನ್ನು ಕೈಗೊಳುವ ಮೂಲಕ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಅಗತ್ಯ ತರಬೇತಿ ಹಾಗೂ ಮಾರ್ಗದರ್ಶನವನ್ನು ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ನೀಡಲಾಗುವುದು ಗ್ರಾಮದ ಮಹಿಳೆಯರಿಗಾಗಿ ಹೊಲಿಗೆ ತರಬೇತಿಯನ್ನು ನೀಡಲಾಗುತ್ತಿದು ತರಬೇತಿಯನ್ನು ಪಡೆದ ಸದಸ್ಯರು ತಮ್ಮ ಮನೆಗಳಲ್ಲಿ ಹೋಲಿಗೆಯ ಮೂಲಕ ಉತ್ತಮ ಆರ್ಥಿಕತೆಯನ್ನು ಹೊಂದುವ ಮೂಲಕ ನಿಮ್ಮ ಕುಟುಂಬವನ್ನು ಉತ್ತಮ ರೀತಿಯಲ್ಲಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ರಾ.ಪಂ. ಸದಸ್ಯರಾದ ಬೀರಪ್ಪ, ವಾಲ್ಮೀಕಿ ಸಮುದಾಯ ಭವನದ ಕಮಿಟಿ ಸದಸ್ಯರಾದ ಹನುಮೇಶ್, ವಲಯದ ಮೇಲ್ವಿಚಾರಕರಾದ ರಾಘವೇಂದ್ರ , ಜ್ಞಾನ ವಿಕಾಸ ಸಮನ್ವಯಾಧಿಕಾರಿ ಜ್ಯೋತಿ ಕಾರ್ಯಕ್ಷೇತ್ರದ ಸೇವಾ ಪ್ರತಿನಿಧಿಗಳು ಒಕ್ಕೂಟದ ಅಧ್ಯಕ್ಷರು ತರಬೇತಿಯ ಶಿಕ್ಷಕರು ಕೇಂದ್ರದ ಸದಸ್ಯರು ಭಾಗವಹಿಸಿದರು.

# ರಾಯಚೂರು ಜಿಲ್ಲಾ ಉತ್ಸವ-2026: ಕವಿಗೋಷ್ಠಿಗೆ ಕವಿತೆಗಳ ಆಹ್ವಾನ

■ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 10 (ಕರ್ನಾಟಕ ವಾರ್ತೆ): 2026ರ ಜನವರಿ 29, 30 ಮತ್ತು 31ರಂದು ರಾಯಚೂರಿನಲ್ಲಿ ಜಿಲ್ಲಾಡಳಿತದಿಂದ ನಡೆಯಲಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ನಿಮಿತ್ತ ಕವಿಗೋಷ್ಠಿ ನಡೆಸಲು ರಾಯಚೂರು ಜಿಲ್ಲಾಡಳಿತವು ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿನ ಕವಿಗಳಿಂದ ಸ್ವರಚಿತ ಕವಿತೆಗಳನ್ನು ಆಹ್ವಾನಿಸಿದೆ. ಕವಿತೆಯು ಸ್ವತಂತ್ರ ರಚನೆಯಾಗಿರಬೇಕು.**

ಕವಿತೆಯನ್ನು ಒಂದು ಪುಟ ಮೀರದಂತೆ




ನುಡಿ ಅಥವಾ ಯುನಿಕೋಡ್‌ನಲ್ಲಿ ಟೈಪ್ ಮಾಡಿ ವರ್ಡ್ ಫಾರ್ಮೆಟನಲ್ಲಿ ಜನವರಿ 14ರೊಳಗೆ ಇ-ವಿಳಾಸ raichurdipr@gmail.com ಗೆ ಇ-ಮೇಲ್ ಮಾಡಬಹುದು. ಅಥವಾ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪತ್ರಿಕಾ ಭವನದ ಮೊದಲನೇ ಮಹಡಿ, ಶ್ರೀ ಪಂಡಿತ ಸಿದ್ದರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರ ಹಿಂದುಗಡೆ, ರೈಲ್ವೆ ನಿಲ್ದಾಣದ ರಸ್ತೆ, ರಾಯಚೂರು ಜಿಲ್ಲೆ, ರಾಯಚೂರು ಇಲ್ಲಿಗೆ ಪೋಸ್ಟ್ ಮಾಡಬಹುದು. ಅಥವಾ ಮೊಬೈಲ್ ಸಂಖ್ಯೆ 9916111356 ಅಥವಾ 9008462236 ಗೆ ವಾಟ್ಸಪ್ ಮಾಡಬಹುದಾಗಿದೆ. ಕವಿತೆಯೊಂದಿಗೆ ಕಡ್ಡಾಯವಾಗಿ ತಮ್ಮ ಹೆಸರು, ಸ್ಥಳ, ವಿದ್ಯಾರ್ಹತೆ, ದೂರವಾಣಿ ಸಂಖ್ಯೆಯ ವಿವರ, ವಯಸ್ಸಿನ ದಾಖಲೆಗಾಗಿ ಎಸ್ಸೆಸ್ಸೆಲ್ಸಿ ಅಂಕಪಟ್ಟಿ ಮತ್ತು ವಿಳಾಸದ ದಾಖಲೆಗಾಗಿ ಆದ-ಾರ್ ಕಾರ್ಡ್ ಝರಾಕ್ಸ ಪ್ರತಿ ಕಳುಹಿಸಬೇಕು. ಕವಿಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಬರುವ ಕವಿತೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ರಾಯಚೂರು ಜಿಲ್ಲಾ ಉತ್ಸವದ ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಸಮಿತಿಯ ಪ್ರಕಟಣೆ ತಿಳಿಸಿದೆ.

# ಇಂದು ಜ.11 ರಂದು ದೇವದುರ್ಗದಲ್ಲಿ ತರಬೇತಿ ಕಾರ್ಯಗಾರ

■ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮುಂಬರುವ ಚುನಾವಣೆಗೆ ಕಾರ್ಯಕರ್ತರನ್ನು ಸಿದ್ದಗೊಳಿಸಲು ಹಾಗೂ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕು-ರಿತಾಗಿ ಮಾಹಿತಿ ನೀಡಲು ಜಿಲ್ಲಾ ಜೆಡಿಎಸ್ ಪಕ್ಷದಿಂದ ಜ.11 ರಂದು ಜಿಲ್ಲೆಯ ದೇವದುರ್ಗ ಪಟ್ಟಣದಲ್ಲಿ ಸಾಮಾಜಿಕ ಜಾಲತಾಣದ ಬಳಕೆ ಕುರಿತು ಕಾರ್ಯಕರ್ತರಿಗೆ ತರಬೇತಿ ಕಾರ್ಯಗಾರ ಆಯೋಜಿಸಲಾಗಿದೆಂದು ಜೆಡಿಎಸ್ ಜಿಲ್ಲಾಧ್ಯಕ್ಷ ಎಂ.ವಿರೂಪಾಕ್ಷಿ ಹೇಳಿದರು.**



ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಲು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೆಗೌಡ ನಿರ್ಧರಿಸಿ ಸೂಚನೆ ನೀಡಿದ್ದಾರೆ. ಪ್ರತಿ ಬೂತ ಎಜೆಂಟ್‌ಗಳಿಗೆ ತರಬೇತಿ ಸಮಾಜಿಕ ಜಾಲತಾಣ ಬಳಕೆ ಕುರಿತು ಅರಿವು ಮೂಡಿಸಲಾಗುತ್ತದೆ. ಈಗಾಗಲೇ ನಾಲ್ಕು ತಂಡಗಳನ್ನು ರಚಿಸಿ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲು ನಿರ್ಧರಿಸಲಾಗಿದೆ. ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಯುವಕ ಯುವತಿಯರನ್ನು ಸಿದ್ದಗೊಳಿಸಲಾಗುತ್ತಿದೆ ಎಂದರು.

2002 ರಲ್ಲಿ ನಡೆದಿದ್ದ ಮತದಾರರ ಪರಿಷ್ಕರಣೆ ಮತ್ತೆ ನಡೆಸಲು ಸರ್ಕಾರಗಳು ಉದ್ದೇಶಿಸಿದರಿಂದ ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿ ಸೇರ್ಪಡೆ, ಮರಣ ಹೊಂದಿದವರು, ಸ್ಥಳಾಂತರಗೊಂಡವರ ಮಾಹಿತಿ ಸಂಗ್ರಹಿಸಿ ಮತದಾರರ ವಿಶೇಷ ಪರಿಷ್ಕರಣೆಗೆ ಪಕ್ಷದ ಕಾರ್ಯಕರ್ತರ ತೊಡಗಿಸುವಿಕೆ ಕು-ರಿತು ಮಾಹಿತಿ ಒದಗಿಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಎನ್.ಶಿವಶಂಕರ, ಪ್ರಮುಖರಾದ ಲಕ್ಷ್ಮೀಪತಿ ಗಾಣಧಾಳ, ಸಣ್ಣ ನರಸಿಂಹ ನಾಯಕ, ರಾಮಕೃಷ್ಣ, ಅಮರೇಶ ಪಾಟೀಲ್, ನಾಗರಾಜಗೌಡ ಇದ್ದರು.

# ಮೈಸೂರಿನಲ್ಲಿ ಕೆಆರ್‌ಎಸ್ ಪಕ್ಷದಿಂದ ಯುವ ಸಮಾವೇಶ ಮತ್ತು ಡ್ರಗ್ಸ್ ವಿರುದ್ಧ ಬೃಹತ್ ಜಾಗೃತಿ ಜಾಥಾ

■ ನೈಜ್ಯ ದೆಸೆ ನ್ಯೂಸ್

**ಮೈಸೂರಿನಲ್ಲಿ ಕೆಆರ್‌ಎಸ್ ಪಕ್ಷದಿಂದ ಯುವ ಸಮಾವೇಶ ಮತ್ತು ಡ್ರಗ್ಸ್ ವಿರುದ್ಧ ಬೃಹತ್ ಜಾಗೃತಿ ಜಾಥಾ ಸ್ವಾಮಿ ವಿವೇಕಾನಂದರ ಜಯಂತಿಯ ಅಂಗವಾಗಿ ಜನವರಿ 12, 2026 ರಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಯುವ ಘಟಕವು ಮೈಸೂರಿನ ಪುರಭವನದಲ್ಲಿ ಬೃಹತ್ ಯುವ ಸಮಾವೇಶವನ್ನು ಹಮ್ಮಿಕೊಂಡಿದೆ.**

ಇದೇ ದಿನಾಂಕವು ಪಕ್ಷದ ಸೈನಿಕರಿಗೆ ಸ್ಫೂರ್ತಿಯಾಗಿದ್ದ ಮಾಜಿ ಕಾರ್ಯಾಧ್ಯಕ್ಷ ಎಸ್. ಎಚ್. ಲಿಂಗೇಗೌಡರ ಜನ್ಮದಿನವಾಗಿದ್ದು, ಅಂದು ಅವರನ್ನು ಸ್ಮರಿಸುವ ವಿಶೇಷ ಕಾರ್ಯಕ್ರಮವೂ ನಡೆಯಲಿದೆ. ಸಮಾವೇಶದಲ್ಲಿ ಪಕ್ಷದ ಗೌರವಾಧ್ಯಕ್ಷ ರವಿ ಕೃಷ್ಣಾರೆಡ್ಡಿ, ಅಧ್ಯಕ್ಷ ದೀಪಕ್ ಸಿ. ಎನ್., ಕಾರ್ಯಾಧ್ಯಕ್ಷ ರಘು ಜಾಣಗೆರೆ ಹಾಗೂ ಯುವ ಘಟಕದ ಅಧ್ಯಕ್ಷೆ ಜನನಿ ವತ್ಸಲ ಸೇ-ರಿದಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.



ಸಮಾವೇಶದ ಮುಕ್ತಾಯದ ನಂತರ 'ಡ್ರಗ್ಸ್ ಮುಕ್ತ ಕರ್ನಾಟಕ'ಕ್ಕಾಗಿ ನಗರದ ಗಾಂಧಿ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ ಸುಮಾರು 4 ಕಿಲೋಮೀಟರ್‌ಗಳ ಬೃಹತ್ ಕಾಲ್ನಡಿಗೆ ಜಾಥಾವನ್ನು ಆಯೋಜಿಸಲಾಗಿದೆ.

ಇಂದಿನ ಸರ್ಕಾರಗಳು ಯುವಜನರ ಭವಿಷ್ಯವನ್ನು ಕಡೆಗಣಿಸುತ್ತಿರುವ ಈ ಸಂದರ್ಭದಲ್ಲಿ, ಯುವಕರಲ್ಲಿ ದೇಶಭಕ್ತಿ ಮತ್ತು ಸ್ವಾಭಿಮಾನ ತುಂಬುವ ಮೂಲಕ ವ್ಯವಸ್ಥೆಯನ್ನು ಸರಿಪಡಿಸಲು ಕೆಆರ್‌ಎಸ್ ಪಕ್ಷವು ನಿರಂತರವಾಗಿ ಶ್ರಮಿಸುತ್ತಿದೆ. ಕಳೆದ ಮೂರು ವರ್ಷಗಳಿಂದ ದಾವಣಗೆರೆ, ಕೊಪ್ಪಳ ಮತ್ತು ಬೆಳಗಾವಿಯಲ್ಲಿ ಯಶಸ್ವಿಯಾಗಿ ಯುವ ಸಮಾವೇಶಗಳನ್ನು ನಡೆಸಿದ ನಂತರ ಈಗ ಮೈಸೂರಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ವಿಶೇಷವಾಗಿ ಕೆಳವರ್ಗದ ಯುವಜನರನ್ನು ಸಶಕ್ತಗೊಳಿಸುವ ಮತ್ತು ಅವರನ್ನು ಪ್ರಾಮಾಣಿಕ ರಾಜಕಾರಣದಲ್ಲಿ ತೊಡಗಿಸುವ ಮೂಲಕ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆ ತರಲು ಸಾಧ್ಯವೆಂದು ಪಕ್ಷವು ಬಲವಾಗಿ ನಂಬಿದೆ. ಇಂದು ಯುವಜನತೆ ನಿರುದ್ಯೋಗ, ಮದ್ಯಪಾನ ಮತ್ತು ಡ್ರಗ್ಸ್‌ನಂತಹ ಗಂಭೀರ ಸಮಸ್ಯೆಗಳಿಂದ ಕಂಗಾಲಾಗಿದ್ದು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸಲು ಈ ಜಾಥಾ ಆಯೋಜಿತವಾಗಿದೆ. ಆದ್ದರಿಂದ ಮೈಸೂ-ರಿನ ಯುವಜನರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾವೇಶದಲ್ಲಿ ಪಾಲ್ಗೊಳ್ಳಬೇಕೆಂದು ಪಕ್ಷವು ಮನವಿ ಮಾಡಿದೆ.

# ಅಭಿಯೋಜಕರ ಅಕಾಡೆಮಿ ಸ್ಥಾಪನೆ :ಮುಖ್ಯಮಂತ್ರಿ ಭರವಸೆ

■ ನೈಜ್ಯ ದೆಸೆ ನ್ಯೂಸ್

**ಅಸಮಾನತೆಯಿರುವ ಸಮಾಜದಲ್ಲಿ ಬಡವ, ಬಲ್ಲಿದ ಎನ್ನದೇ ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಸಮಾನತೆ, ನ್ಯಾಯ ಒದಗಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಬೆಂಗಳೂರಿನಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಅಭಿಯೋಜನಾಧಿಕಾರಿಗಳ ಸಂಘದ ವತಿಯಿಂದ ಕೆಇಬಿ ಎಂಜಿನಿಯರ್ ಅಸೋಸಿಯೇಷನ್ ರಜತ ಮಹೋತ್ಸವ ದಲ್ಲಿ ಆಯೋಜಿಸಲಾಗಿದ್ದ ತರಬೇತಿ ಕಾರ್ಯಾಗಾರ ಹಾಗೂ 17 ನೇ ರಾಜ್ಯ ಮಟ್ಟದ ಸಮ್ಮೇಳನ ಕಾರ್ಯಕ್ರಮ ದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.**



ಅಭಿಯೋಜಕರು ನ್ಯಾಯ ಸಂರಕ್ಷಕರು. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವೆಲ್ಲವೂ ಸಮನ್ವಯತೆಯಿಂದ ಕೆಲಸ ಮಾಡಿದಾಗ ಮಾತ್ರ ಸುಖಿ ರಾಜ್ಯ ಸ್ಥಾಪನೆ ಸಾಧ್ಯ. ಸಮಾಜದ ಜನರ ಹಿತ ಕಾಪಾಡುವುದು ನಮ್ಮೆಲ್ಲರ ಕೆಲಸ. ನಾಗ-ರಿಕ ಸುರಕ್ಷಾ ಸಂಹಿತೆಯನ್ನು ಕೇಂದ್ರ ಸರ್ಕಾರ ಜಾರಿ ಮಾಡಿದೆ. ಕಾಯ್ದೆಯ ಸೆಕ್ಷನ್ 8 ಮತ್ತು 9 ರ ಪ್ರಕಾರ ಅಭಿಯೋಜಕರನ್ನು ವಿಂಗಡಿಸಿ, ಕರ್ತವ್ಯಗಳನ್ನು ಹೇಳಿದ್ದಾರೆ. ಆರೋಪಿಗಳ ಹಕ್ಕುಗಳನ್ನು ಸಂರಕ್ಷಿಸಬೇಕೆಂದು ನಿಯಮ ರೂಪಿಸಿದೆ. ನೂರು ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಂಡರೂ, ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು ಎಂದರು.

ಆರೋಪಿಗಳ ಪರವಾಗಿರುವ ಸಾಕ್ಷ್ಯಾಧಾರಗಳನ್ನೂ ನ್ಯಾಯಾಲಯದ ಗಮನಕ್ಕೆ ತರುವುದು ಅಭಿಯೋಜಕರ ಆದ್ಯ ಕರ್ತವ್ಯ. ತನಿಖಾಧಿಕಾರಿಗಳ ಜೊತೆ ಮಾತನಾಡುವುದು, ಸಾಕ್ಷಿಗಳ ವಿಚಾರಣೆ, ಪಾಟಿ ಸವಾಲು ಮಾಡುವಾಗ ಎಚ್ಚರಿಕೆಯಿಂದ ಮಾಡಿದರೆ ಶಿಕ್ಷೆ ಪ್ರಮಾಣ ಹೆಚ್ಚಾಗಲು ಸಾಧ್ಯ ಎಂದರು. ಎನ್.ಸಿ.ಆರ್.ಬಿ ವರದಿ ಪ್ರಕಾರ ಶಿಕ್ಷೆ ಪ್ರಮಾಣ ದರದಲ್ಲಿ ಕರ್ನಾಟಕ, ಬಿಹಾರ ಮತ್ತು ರಾಜಸ್ಥಾನ 22 ನೇ ಸ್ಥಾನದಲ್ಲಿದೆ. ಕೇರಳದಲ್ಲಿ 87% ರಷ್ಟಿದೆ., ಮಿಜೋರಾಂ 92%, ಗುಜರಾತ್ ಮತ್ತು ತೆಲಂಗಾಣ 57%, , ಉತ್ತರ ಪ್ರದೇಶದಲ್ಲಿ 72%, ದೆಹಲಿ 89% ರಷ್ಟಿದೆ. ನಾವು ಕೇರಳ ರಾಜ್ಯದೊಂದಿಗೆ ಹೋಲಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ಕಿವಿ ಮಾತು ಹೇಳಿದರು.

ನ್ಯಾಯ ಎತ್ತಿ ಹಿಡಿಯುವ ಪ್ರಯತ್ನವನ್ನು ಅಭಿಯೋಜಕರು ಮಾಡಬೇಕು, ಸಮಸ್ಯೆಗಳ ಹೊರತಾಗಿಯೂ ನ್ಯಾಯ ಒದಗಿಸಬೇಕು. ಸೈಬರ್ ಅಪರಾಧಗಳು, ಆರ್ಥಿಕ , ಅಪರಾಧಗಳು ಶುರುವಾಗಿದ್ದು ಇದಕ್ಕೆ ತರಬೇತಿ ಅತ್ಯಂತ ಅವಶ್ಯಕ. ಅಭಿಯೋಜಕರು ನಿರಂತರ ಅಧ್ಯಯನ ಮಾಡಬೇಕು ಎಂದರು. ಪ್ರತಿ ವರ್ಷವೂ ಸಮ್ಮೇಳನಗಳ ಜರುಗಬೇಕು ಎಂದ ಮುಖ್ಯಮಂತ್ರಿಗಳು ಅಭಿಯೋಜಕರ ಅಕಾಡೆಮಿ ಸ್ಥಾಪಿಸಿ ಅನುದಾನವನ್ನೂ ನೀಡುವ ಭರವಸೆ ನೀಡಿದ ಮುಖ್ಯಮಂತ್ರಿಗಳು, ಬೇಡಿಕೆಗಳನ್ನು ಪರಿಶೀಲಿಸಲಾಗುವುದು ಎಂಬ ಆಶ್ವಾಸನೆಯಿತ್ತರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### M.Pharmಫಾರ್ಮಾಸ್ಯುಟಿಕಲ್ ಬಯೋಟೆಕ್ನಾಲಜಿ

M.Pharm ಫಾರ್ಮಾಸ್ಯುಟಿಕಲ್ ಬಯೋಟೆಕ್ನಾಲಜಿ (M. Pharm Pharmaceutical Biotechnology) ಎಂ.ಫಾರ್ಮ್ ಫಾರ್ಮಾಸ್ಯುಟಿಕಲ್ ಬಯೋಟೆಕ್ನಾಲಜಿ ಎಂಬುದು ಸ್ನಾತಕೋತ್ತರ ಪದವಿ ಕಾರ್ಯಕ್ರಮವಾಗಿದ್ದು, ಇದು ಔಷಧ ಮತ್ತು ಔಷಧ ಉದ್ಯಮದ ಜೈವಿಕ ತಂತ್ರಜ್ಞಾನದ ಅಂಶಗಳನ್ನು ಪರಿಶೋಧಿಸುತ್ತದೆ. ಈ ಕಾರ್ಯಕ್ರಮವು ಫಾರ್ಮಾಕೊಜೀನೋಮಿಕ್ಸ್, ಬಯೋಟೆಕ್ ಫಾರ್ಮಾಸ್ಯುಟಿಕಲ್ ಡ್ರಗ್ಸ್ ಮತ್ತು ಪ್ರೋಟೀನ್‌ಗಳು, ಪ್ರತಿ–ಕಾಯಗಳು, ಆರ್–ಡಿಎನ್‌ಎ ಉತ್ಪನ್ನಗಳು ಮುಂತಾದ ಔಷಧೀಯ ಜೈವಿಕ ತಂತ್ರಜ್ಞಾನ ಉತ್ಪನ್ನಗಳಲ್ಲಿರುವ ಹೈಬ್ರಿಡೋಮಾಗಳು, ಮ್ಯಾಕ್ರೋ ಮತ್ತು ಸೂಕ್ಷ್ಮಜೀವಿಗಳ ಆಳವಾದ ಅಧ್ಯಯನವನ್ನು ನಿರ್ವಹಿಸುತ್ತದೆ ಜೈವಿಕ ತಂತ್ರಜ್ಞಾನವನ್ನು ಔಷಧಗಳ ಅಭಿವೃದ್ಧಿ ಮತ್ತು ತಯಾ–ರಿಕೆಯಲ್ಲಿ ಬಳಸುವ ಬಗ್ಗೆ ಅಧ್ಯಯನ ಮಾಡುತ್ತದೆ, ಇದರಲ್ಲಿ ಹೈಬ್ರಿಡೋಮಾಸ್, ಪ್ರೋಟೀನ್ ಆಧಾರಿತ ಔಷಧಿಗಳು, ಫಾರ್ಮಾಕೊಜೆನೊಮಿಕ್ಸ್ ಮತ್ತು ಜೈವಿಕ ತಂತ್ರಜ್ಞಾನ ಉತ್ಪನ್ನಗಳ ಆಳವಾದ ತಿಳುವಳಿಕೆ ನೀಡಲಾಗುತ್ತದೆ, ಇವುಗಳನ್ನು ಕಾಲೇಜುಡೆಖೋ.ಕಾಂ ಮತ್ತು ಭಾರತಿ ವಿದ್ಯಾಪೀಠ ನಿಂದ ಪಡೆದ ಮಾಹಿತಿ. ಕೋರ್ಸ್‌ನ ಮುಖ್ಯ ವಿಷಯಗಳು: ಜೈವಿಕ ತಂತ್ರಜ್ಞಾನದ ಮೂಲಭೂತ ತತ್ವಗಳು: ಔಷಧೀಯ ಕ್ಷೇತ್ರದಲ್ಲಿ ಜೈವಿಕ ತಂತ್ರಜ್ಞಾನದ ಅನ್ವಯಗಳು. ಫಾರ್ಮಾಸ್ಯುಟಿಕಲ್ ಡ್ರಗ್ಸ್: ಪ್ರೋಟೀನ್‌ಗಳು, ಪ್ರತಿಕಾಯಗಳು, recombinant DNA (rDNA) ತಂತ್ರಜ್ಞಾನದ ಮೂಲಕ ತಯಾರಿಸಿದ ಔಷಧಿಗಳು. ಫಾರ್ಮಾಕೊಜೆನೊಮಿಕ್ಸ್: ಜೀನ್‌ಗಳು ಮತ್ತು ಔಷಧಗಳ ನಡುವಿನ ಸಂಬಂಧದ ಅಧ್ಯಯನ. ಹೈಬ್ರಿಡೋಮಾಗಳು ಮತ್ತು ಮ್ಯಾಕ್ರೋ/ಸೂಕ್ಷ್ಮಜೀವಿಗಳು: ಇವುಗಳ ಬಳಕೆ ಮತ್ತು ಅಧ್ಯಯನ. ಔಷಧಗಳ ಸಂಶೋಧನೆ ಮತ್ತು ಅಭಿವೃದ್ಧಿ: ಬಯೋಟೆಕ್ನಾಲಜಿ ಬಳಸಿ ಹೊಸ ಔಷಧಗಳನ್ನು ಕಂಡುಹಿಡಿಯುವುದು. ಕೋರ್ಸ್‌ನ ಉದ್ದೇಶ: ವಿದ್ಯಾರ್ಥಿಗಳಿಗೆ ಔಷಧೀಯ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಪರಿಣತರನ್ನಾಗಿ ಮಾಡುವುದು. ಉದ್ಯಮಕ್ಕೆ ಅಗತ್ಯವಿರುವ ಜ್ಞಾನ ಮತ್ತು ಕೌಶಲ್ಯಗಳನ್ನು ನೀಡುವುದು. ಫಾರ್ಮಸಿ ಅಥವಾ ಬಯೋಟೆಕ್ನಾಲ–ಜಿಯಲ್ಲಿ B.Pharm ಪದವಿ ಪಡೆದವರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಕೋರ್ಸ್ ವಿದ್ಯಾರ್ಥಿಗಳಿಗೆ ಔಷಧೀಯ ಕ್ಷೇತ್ರದಲ್ಲಿ ಜೈವಿಕ ತಂತ್ರಜ್ಞಾನದ ಸುಧಾರಿತ ಜ್ಞಾನವನ್ನು ನೀಡಿ, ಈ ಕ್ಷೇತ್ರದಲ್ಲಿ ವೃತ್ತಿಜೀವನ ರೂಪಿಸಿಕೊಳ್ಳಲು ಸಹಾಯ ಮಾಡುತ್ತದೆ. ವ್ಯವಹಾರ ಅಭಿವೃದ್ಧಿ ಕಾರ್ಯನಿರ್ವಾಹಕ, ಪ್ರಯೋಗಾಲಯ ಬೋಧಕ, ಗ್ರಾಹಕ ಪರಿಹಾರಗಳ ಅನ್ವಯಿಕ ವಿಜ್ಞಾನಿ, ಪ್ರಯೋಗಾಲಯ ತಂತ್ರಜ್ಞ, ಸಂಶೋಧನಾ ಸಹಾಯಕ, ಮಾರ್ಕೆಟಿಂಗ್ ಕಾರ್ಯನಿರ್ವಾಹಕ ತರಬೇತಿದಾರ, ಇತ್ಯಾದಿ.ಅಭ್ಯರ್ಥಿಗಳು ಬಿ.ಫಾರ್ಮ್ (ಬ್ಯಾಚುಲರ್ ಆಫ್ ಫಾರ್ಮಸಿ) ಪದವಿಯನ್ನು ಹೊಂದಿರಬೇಕು. ಪದವಿಯನ್ನು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ನೀಡಿರಬೇಕು. ಕನಿಷ್ಠ ಶೇಕಡಾವಾರು ಪ್ರಮಾಣವು ಸಂಸ್ಥೆಯಿಂದ ಸಂಸ್ಥೆಗೆ ಬದಲಾಗುತ್ತದೆ. ಆದ–'ರೆ, ಅಭ್ಯರ್ಥಿಗಳು ತಮ್ಮ ಪದವಿಯಲ್ಲಿ ಕನಿಷ್ಠ ಶೇಕಡಾ 50 ಅಂಕಗಳನ್ನು ಗಳಿಸಿರಬೇಕು. ಅನೇಕ ಕಾಲೇಜುಗಳಲ್ಲಿ ಎಂ.ಫಾರ್ಮ್ ಫಾರ್ಮಾಸ್ಯುಟಿಕಲ್ ಬಯೋಟೆಕ್ನಾಲಜಿ ಕೋರ್ಸ್‌ಗೆ ಪ್ರವೇಶವನ್ನು ಪ್ರವೇಶ ಪರೀಕ್ಷೆಗಳ ಮೂಲಕ ಮಾಡಲಾಗುತ್ತದೆ. ಈ ಪ್ರವೇಶ ಪರೀಕ್ಷೆಗಳು ಸಂಸ್ಥೆ–ನಿರ್ದಿಷ್ಟ ಅಥವಾ ರಾಜ್ಯ ಮಟ್ಟದದ್ದಾಗಿರಬಹುದು. ಪರೀಕ್ಷೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಅಭ್ಯರ್ಥಿಗಳನ್ನು ಪ್ರವೇಶ ಪ್ರಕ್ರಿಯೆಯನ್ನು ಮುಂದುವರಿಸಲು ಕರೆಯಲಾಗುತ್ತದೆ. ನೇರ ಪ್ರವೇಶವನ್ನು ನೀಡುವ ಅನೇಕ ಕಾಲೇಜುಗಳಿವೆ. ಅಂತಹ ಸಂದರ್ಭದಲ್ಲಿ, ಅಭ್ಯರ್ಥಿಗಳ ಸ್ನಾತಕೋತ್ತರ ಪದವಿಯ ಕಾರ್ಯಕ್ಷಮತೆಯನ್ನು ಆಯ್ಕೆಗೆ ಪರಿಗಣಿಸಲಾಗುತ್ತದೆ. ಬಿ.ಫಾರ್ಮ್‌ನಲ್ಲಿ ಅಭ್ಯರ್ಥಿಯು ಹೆಚ್ಚು ಅಂಕಗಳನ್ನು ಗಳಿಸಿದ್ದಷ್ಟೂ, ಪ್ರವೇಶ ಪಡೆಯುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಎಚ್‌ಪಿವಿ ಲಸಿಕೆಯ ತಿಳಿವಳಿಕೆ ನೀಡಿ

ನೈಜ್ಯ ದೆಸೆ ನ್ಯೂಸ್

**ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗೆ ರಾಜ್ಯ ಸರ್ಕಾರ ದಿಟ್ಟಹೆಜ್ಜೆ ಇಟ್ಟಿದ್ದು, 9 ರಿಂದ 14 ವರ್ಷದೊಳಗಿನ ಶಾಲಾ ಹೆಣ್ಣು ಮಕ್ಕಳಿಗೆ ಜಿಲ್ಲೆಯಲ್ಲಿ ಉಚಿತ ಹ್ಯೂಮನ್ ಪ್ಯಾಪಿಲೋಮ ವೈರಸ್ (ಎಚ್‌ಪಿವಿ) ಲಸಿಕೆ ವಿಜಯಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜು: ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ.**

115 ದಿನಗಳ ಅವಿರತ ಜನ ಹೋರಾಟಕ್ಕೆ ಜಯ ಸಿಕ್ಕಿದೆ. ಜಿಲ್ಲೆಯ ಜನತೆಯ ದಶಕಗಳ ಕನಸು ನನಸಾಗಿದೆ. ವಿಜಯಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವುದಾಗಿ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ನಗರಕ್ಕೆ ಶುಕ್ರವಾರ ಬಂದು ಘೋಷಣೆ ಮಾಡಿದ್ದಾರೆ. 'ಉದ್ದೇಶಿತ ಖಾಸಗಿ–ಸಾರ್ವಜನಿಕ ಸಹಭಾಗಿತ್ವವನ್ನು ಸಂಪೂರ್ಣ ಕೈಬಿಡುತ್ತೇವೆ. ಹೋರಾಟವನ್ನು ಕೈಬಿಡಿ' ಎಂದು ಮನವಿ ಮಾಡಿದರು. 'ರಾಜ್ಯದ 22 ಜಿಲ್ಲೆಗಳಲ್ಲಿ ಈಗಾಗಲೇ ಸರ್ಕಾರಿ ವೈದ್ಯಕೀಯ ಕಾಲೇಜುಗಳಿವೆ. ವಿಜಯಪುರ ಸೇರಿದಂತೆ ರಾಜ್ಯದ ಇನ್ನುಳಿದ ಜಿಲ್ಲೆಗಳಲ್ಲೂ ಸರ್ಕಾರವೇ ವೈದ್ಯಕೀಯ ಕಾಲೇಜು ಸ್ಥಾಪಿಸಲಿದೆ. ಜೊತೆಗೆ ಟ್ರಾಮಾ ಸೆಂಟ–ರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ತೆರೆಯುತ್ತೇವೆ' ಎಂದು ಭರವಸೆ ನೀಡಿದರು.

ಸಚಿವ ಶಿವಾನಂದ ಪಾಟೀಲ ಮಾತನಾಡಿ, ರಾಜ್ಯಕ್ಕೆ ಅನ್ನಭಾಗ್ಯ ನೀಡಿರುವ ಸಿದ್ದರಾಮಯ್ಯ ಅವರು ಜಿಲ್ಲೆಗೆ ಆರೋಗ್ಯ ಭಾಗ್ಯ ನೀಡಿರುವುದಕ್ಕೆ ಜಿಲ್ಲೆಯ ಜನತೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ' ಎಂದರು. 'ವಿಜಯಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜು ನಿರ್ಮಾಣಕ್ಕೆ ಈ ಬಾರಿಯ ಬಜೆಟ್‌ನಲ್ಲಿ




ಘೋಷಣೆ ಮಾಡಿ, ಅಗತ್ಯ ಅನುದಾನ ನೀಡಬೇಕು' ಎಂದು ಮನವಿ ಮಾಡಿದರು. ಪ್ರಕರಣ ಕೈಬಿಡಿ: ಮುಖ್ಯಮಂತ್ರಿಯವರಿ ಸರ್ಕಾರಿ ಕಾಲೇಜು ಘೋಷಣೆ ಮಾಡಿರುವುದಕ್ಕೆ ಹೋರಾಟ ಸಮಿತಿ ಸ್ವಾಗತಿಸಿದೆ. ಜೈಲಿನಲ್ಲಿರುವ ಎಲ್ಲಾ ಹೋರಾಟಗಾರರನ್ನು ಬೇಷರತ್ತಾಗಿ ಕೂಡಲೇ ಬಿಡುಗಡೆಗೊಳಿಸಬೇಕು.

ಎಲ್ಲಾ 27 ಜನರ ಮೇಲಿನ ಸುಳ್ಳು ಪ್ರಕರಣಗಳನ್ನು ಶಾಶ್ವತವಾಗಿ ಕೈ ಬಿಡಬೇಕು ಎಂದು ಹೋರಾಟ ಸಮಿತಿಯು ಆಗ್ರಹಿಸಿದೆ. ಮುಖ್ಯಮಂತ್ರಿಗಳ ವಾಗ್ದಾನದಿಂದ ಇಂದಿನಿಂದ ಅನಿರ್ದಿಷ್ಟ ಧರಣಿ ಹಿಂಪಡೆಯಲಾಗಿದೆ. ಆದರೆ, ಸರ್ಕಾರಿ ವೈದ್ಯಕೀಯ ಕಾಲೇಜು ಶಂಕುಸ್ಥಾಪನೆ ಯಾಗುವವರೆಗೂ ಹೋರಾಟ ಸಮಿತಿಯು ಅಸ್ತಿತ್ವದಲ್ಲಿರುತ್ತದೆ ಮತ್ತು ಅದಕ್ಕೆ ಸಂಬಂಧಿತ ಚಟುವಟಿಕೆಗಳನ್ನು ಬೇರೆ ಬೇರೆ ಸ್ವರೂಪಗಳಲ್ಲಿ ಮುಂದುವರೆಸಲಾಗುತ್ತದೆ' ಎಂದು ತಿಳಿಸಿದ್ದಾರೆ. 'ಎಲ್ಲಾ ಹೋರಾಟಗಾರರು ಜೈಲಿನಿಂದ ಬಿಡುಗಡೆಯಾಗಿ ಬರುವವರೆಗೂ ಯಾವುದೇ ವಿಜಯೋತ್ಸವ ಹೋರಾಟ ಸಮಿತಿಯಿಂದ ಇರುವುದಿಲ್ಲ. ಅವರು ಜೈಲಿನಿಂದ ಬಂದ ಮೇಲೆ ಸಭೆ ಸೇರಿ ನಿರ್ಧರಿಸಲಾಗುವುದು' ಎಂದು ಹೋರಾಟ ಸಮಿತಿ ಸದಸ್ಯ ಎಚ್.ಟಿ.ಭರತ್ ಕುಮಾರ್ 'ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವರಾದ ಶಿವಾನಂದ ಪಾಟೀಲ, ಎಂ.ಬಿ.ಪಾಟೀಲ, ಲಕ್ಷ್ಮಿ ಹೆಬ್ಬಾಳಕರ್, ರಾಮಲಿಂಗಾರೆಡ್ಡಿ, ಎಚ್.ಸಿ.ಮಹಾದೇವಪ್ಪ, ಡಾ.ಎಂ.ಸಿ.ಸುಧಾಕರ, ಬೈರತಿ ಸುರೇಶ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಯಶವಂತ ರಾಯಗೌಡ ಪಾಟೀಲ, ವಿಠಲ ಕಟಕದೊಂಡ, ಅಶೋಕ ಮನಗೂಳಿ, ಸಿ.ಎಸ್.ನಾಡಗೌಡ, ವಿಧಾನ ಪರಿಷತ್ ಸದಸ್ಯ ಸುನೀಲ್ ಗೌಡ ಪಾಟೀಲ, ಪ್ರಕಾಶ ಹುಕ್ಕೇರಿ, ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ಕೌಶಲಾಭಿವೃದ್ಧಿ ನಿಗಮದ ಕಾಂತಾ ನಾಯಕ, ಮಹಾನಗರ ಪಾಲಿಕೆ ಮೇಯರ್ ಎಂ.ಎಸ್.ಕರಡಿ, ಮುಖಂಡರಾದ ಅಬ್ದುಲ್ ಹಮೀದ್ ಮುಶ್ರೀಫ್, ಮಲ್ಲಿಕಾರ್ಜುನ ಲೋಣಿ, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಬುರಾಣಪುರದ ಯೋಗಿಶ್ವರಿ ಮಾತಾ, ಮನಗೂಳಿಯ



ಸಂಗನಬಸವ ಸ್ವಾಮೀಜಿ ಉಪಸ್ಥಿತರಿದ್ದರು.

ವಿಜಯಪುರ ನಗರದ ಕೇಂದ್ರ ಬಸ್ ನಿಲ್ದಾಣದ ಎದುರು ಪ್ರತಿಷ್ಠಾಪಿಸಿರುವ ಕಿತ್ತೂರು ರಾಣಿ ಚನ್ನಮ್ಮ ಮೂರ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣ ಮಾಡಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವರು ಸ್ವಾಮೀಜಿಗಳು ಇದ್ದರು ಸಿದ್ದರಾಮಯ್ಯ ಮುಖ್ಯಮಂತ್ರಿಸಿಪಾಯಿ ದಂಗೆಗೂ 33 ವರ್ಷಗಳ ಮೊದಲೇ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಕೆಚ್ಚೆದೆ ಬದ್ಧತೆ ಛಲದೊಂದ ಹೋರಾಡಿದ ಕೀರ್ತಿ ಕಿತ್ತೂರು ರಾಣಿ ಚನ್ನಮ್ಮಗೆ ಸಲ್ಲುತ್ತದೆವಚನಾನಂದ ಸ್ವಾಮೀಜಿ ಪಂಚಮಸಾಲಿ ಪೀಠಹರಿಹರ ಬೆಂಗಳೂರು ವಿಧಾನಸೌಧದ ಎದುರು ವೀರರಾಣಿ ಕಿತ್ತೂರು ರಾಣಿ ಚನ್ನಮ್ಮನ ಮೂರ್ತಿ ಪ್ರತಿಷ್ಠಾಪಿಸಲು ಮುಖ್ಯಮಂತ್ರಿ ಸರ್ಕಾರ ಆದ್ಯತೆ ನೀಡಬೇಕು.

ಈ ಮೂಲಕ ಗೌರವ ಸಲ್ಲಿಸಬೇಕು ಶಿವಾನಂದ ಪಾಟೀಲ ಸಚಿವಚನ್ನಮ್ಮ ಕೇವಲ ಒಂದು ಸಮಾಜದ ಸ್ವತ್ತಲ್ಲ ಬ್ರಿಟೀಷರ ವಿರುದ್ಧ ಹೋರಾಡಿದ ದಿಟ್ಟ ಮಹಿಳೆ. ಜಾತ್ಯತೀತ ಮಾನವೀಯ ಮೌಲ್ಯ ಹೊಂದಿರುವ ಮಹಿಳೆಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿಬಸವಣ್ಣನವರ ನಾಡಿನಲ್ಲಿ ಎಲ್ಲಾ ಧರ್ಮ ಜಾತಿಗಳನ್ನು ಅನೇಕ ಶ್ರೀಗಳು ಒಗ್ಗಟ್ಟಾಗಿ ತೆಗೆದುಕೊಂಡು ಹೋಗಿದ್ದು ಈ ಜಿಲ್ಲೆಗಳು ಸರ್ವಜನಾಂಗದ ಶಾಂತಿಯ ತೋಟವಾಗಿದೆ

# 16ರಿಂದ ಹುಲಿಗೆಮ್ಮ ದೇವಿ ಜಾತ್ರೋತ್ಸವ



ನೈಜ್ಯ ದೆಸೆ ನ್ಯೂಸ್

**ಮುದಗಲ್: ತೊಂಡಿಹಾಳ ಗ್ರಾಮದ ಗ್ರಾಮದೇವತೆ ಹುಲಿಗೆಮ್ಮ ದೇವಿ ಜಾತ್ರೆಯಲ್ಲಿ ಅನಿಷ್ಟ ಪದ್ಧತಿಗಳಿಗೆ ಕಡಿವಾಣ ಹಾಕಲಾಗುವುದು ಎಂದು ಲಿಂಗಸುಗೂರು ತಹಸೀಲ್ದಾರ್ ಸತ್ಯಮ್ಮ ಹೇಳಿದರು. ತೊಂಡಿಹಾಳ ಗ್ರಾಮದಲ್ಲಿ ಹುಲಿಗೆಮ್ಮ ದೇವಿ ಜಾತ್ರೆ ಅಂಗವಾಗಿ ತಾಲೂಕು ಆಡಳಿತ ಹಾಗೂ ಲಿಂಗಸುಗೂರು ಪೊಲೀಸ್ ಇಲಾಖೆ ಜಂಟಿಯಾಗಿ ಹಮ್ಮಿಕೊಂಡಿದ್ದ ಸಾರ್ವಜನಿಕ ಜಾಗೃತಿ ಸಭೆಯ ಅಧ್ಯಕ್ಷತೆ ವಹಿಸಿ ಗುರುವಾರ ಮಾತನಾಡಿದರು.**

ಜ.16 ರಿಂದ 18ರವರೆಗೆ ಜಾತ್ರೆ ನಡೆಯಲಿದೆ. ದೇವಿ ಹೆಸರಲ್ಲಿ ಪ್ರಾಣಿಬಲಿ, ದೇವದಾಸಿ ಪದ್ಧತಿ, ಅರೆಬೆತ್ತಲೆ ಉರುಳು ಸೇವೆಯಂತಹ ಅನಿಷ್ಟ ಪದ್ಧತಿಗಳನ್ನು ಆಚರಣೆ ಮಾಡುವಂತಿಲ್ಲ. ಧಾರ್ಮಿಕ ಕ್ರಾರ್ಯಕ್ರಮದ ಮೂಲಕ ಜಾತ್ರೆ ನಡೆಸಬೇಕು ಎಂದರು. ಭಕ್ತರಿಗೆ ಕುಡಿವ ನೀರು, ವಿದ್ಯುತ್ ದೀಪ, ರಸ್ತೆ, ಸಾರಿಗೆ ಸೌಕರ್ಯ ಸೇರಿದಂತೆ ಯಾವುದೇ ತೊಂದರೆ ಆಗದಂತೆ ಜಾಗೃತಿ ವಹಿಸಲು ಕಂದಾಯ ಇಲಾಖೆ ಹಾಗೂ ಹಲಕಾವಟಗಿ ಗ್ರಾಪಂಗೆ ವಹಿಸಲಾಗಿದೆ ಎಂದು ಮಾಹಿತಿ ನೀಡಿದರು.ಸಿಡಿಪಿಒ ನಾಗರತ್ನಾ, ಟಿಎಚ್‌ಒ ಅಮರೇಶ ಪಾಟೀಲ್, ಅಗ್ನಿಶಾಮಕದಳ ಅಧಿಕಾರಿ ಹೊನ್ನಪ್ಪ, ಮುದಗಲ್ ಪುರಸಭೆ ಮುಖ್ಯಾಧಿಕಾರಿ ಪ್ರವೀಣಕುಮಾರ ಬೋಗಾರ, ಉಪತಹಸೀಲ್ದಾರ್ ತುಳುಜಾರಾಮ್ ಸಿಂಗ್, ಕಂದಾಯ ನಿರೀಕ್ಷಕ ಶಂಕ್ರಪ್ಪ,

ಗ್ರಾಮಲೆಕ್ಕಾಧಿಕಾರಿ ಇಮಾಮಸಾಬ್, ಹಲ್ಕಾವಟಗಿ ಗ್ರಾಪಂ ಪಿಡಿಒ ಶಶಿಕಲಾ ಪಾಟೀಲ್, ಪ್ರಮುಖರಾದ ಬೈಲಪ್ಪ, ಬಸಪ್ಪ ಕುರಿ, ಲಕ್ಷಪ್ಪ, ಪರಶುರಾಮ, ಹನಮಂತ, ಸಂಗಮೇಶ ಇತರರಿದ್ದರು. " ಮೂಢನಂಬಿಕೆಯನ್ನು ಜನರು ನಂಬಬಾರದು. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ತಾಲೂಕಾಡಳಿತ ನೇತೃತ್ವದಲ್ಲಿ ವಿವಿಧ ತಂಡಗಳನ್ನು ರಚಿಸಲಾಗಿದೆ. ಭಕ್ತರಿಗೆ ಮೂಲಸೌಕರ್ಯ ಕಲ್ಪಿಸಲು ಸೂಚಿಸಲಾಗಿದೆ.

## ಮಾಡೆಲ್ ಹಿರಿಯ ಪ್ರಾಥಮಿಕ ಶಾಲೆಯ ಕವಿತಾಳ ವಿದ್ಯಾರ್ಥಿಗಳು ಶಿಕ್ಷಕರು ಬಿ ಫ್ರೇಶ್ ನೀರಿನ ಘಟಕಕ್ಕೆ ಭೇಟಿ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಮಾಡೆಲ್ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಶಾಲಾ ಆಡಳಿತ ಮಂಡಳಿಯವರ ನೇತೃತ್ವದಲ್ಲಿ ಕವಿತಾಳ ಪಟ್ಟಣದ ಬಿ ಫ್ರೇಶ್ ಫ್ಯಾಕ್ಟರಿಗೆ ಶೈಕ್ಷಣಿಕ ಬೇಟಿ ನೀಡಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಫ್ಯಾಕ್ಟ–ರಿಯ ಇತಿಹಾಸ, ಉದ್ದೇಶ ಹಾಗೂ ಸ್ಥಳೀಯ ಮಟ್ಟದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಇದರ ಪಾತ್ರದ ಕುರಿತು ಮಾಹಿತಿ ನೀಡಲಾಯಿತು.**

ಕಚ್ಚಾ ವಸ್ತುಗಳ ಸ್ವೀಕಾರದಿಂದ ಆರಂಭಿಸಿ, ಶುದ್ಧೀಕರಣ, ಸಂಸ್ಕರಣೆ, ಯಂತ್ರೋಪಕರಣಗಳ ಸಹಾಯದಿಂದ ಉತ್ಪಾದನೆ, ಗುಣಮಟ್ಟ ಪರಿಶೀಲನೆ, ಪ್ಯಾಕಿಂಗ್ ಮತ್ತು ಮಾರುಕಟ್ಟೆಗೆ



ರವಾನೆಯವರೆಗೆ ನಡೆಯುವ ಸಂಪೂರ್ಣ ಪ್ರಕ್ರಿಯೆಯನ್ನು ಮಕ್ಕಳು ನೇರವಾಗಿ ವೀಕ್ಷಿಸಿದರು. ಜೊತೆಗೆ, ಪರಿಸರ ಸಂರಕ್ಷಣೆ, ವ್ಯರ್ಥ ವಸ್ತುಗಳ ನಿರ್ವಹಣೆ ಹಾಗೂ ಸುರಕ್ಷತಾ ನಿಯಮಗಳ ಪಾಲನೆಯ ಬಗ್ಗೆ ಸಹ ವಿವರಿಸಲಾಯಿತು. ವಿದ್ಯಾರ್ಥಿಗಳು ಕುತೂಹಲದಿಂದ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆದು ತಮ್ಮ ಜ್ಞಾನವನ್ನು ವಿಸ್ತರಿಸಿಕೊಂಡರು.

ಈ ಶೈಕ್ಷಣಿಕ ಬೇಟಿಯಿಂದ ಮಕ್ಕಳಲ್ಲಿ ಕೈಗಾರಿಕಾ ಕ್ಷೇತ್ರದ ಬಗ್ಗೆ ಆಸಕ್ತಿ ಹೆಚ್ಚಿದ್ದು, ಪಾಠ್ಯಜ್ಞಾನದ ಜೊತೆಗೆ ಜೀವನೋಪಯೋಗಿ ತಿಳುವಳಿಕೆ ಪಡೆಯಲು ನೆರವಾಯಿತು. ಶಾಲೆಯ ಶಿಕ್ಷಕರು ಇಂತಹ ಅನುಭವಾಧಾರಿತ ಕಲಿಕೆ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಬಹಳ ಸಹಾಯಕವೆಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾಡಲ್ ಹಿರಿಯ ಪ್ರಾಥ–'ಮಿಕ ಶಾಲೆಯ, ಮುಖ್ಯೋಪಾಧ್ಯಾಯರು, ಶಿಕ್ಷಕರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ನೇತಾಜಿ ವಿಜ್ಞಾನ ವೈಭವ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಸಚಿವ ಎನ್.ಎಸ್.ಬೋಸರಾಜು ರಿಂದ ಚಾಲನೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ನೇತಾಜಿ ಸುಭಾಶಚ್ಚಂದ್ರ ಬೋಸ್ ಶಿಕ್ಷಣ ಸಂಸ್ಥೆಯ ಅವರಣದಲ್ಲಿ ನೇತಾಜಿ ಪ್ರಾಥಮಿಕ ,ಪ್ರೌಡಶಾಲೆ, ಮತ್ತು ಪದವಿಪೂರ್ವ ಕಾಲೇಜ್ ವತಿಯಿಂದ ನಡೆದ ನೇತಾಜಿ ವಿಜ್ಞಾನ ವೈಭವ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ನೂತನ ನೇತಾಜಿ ವಿಜ್ಞಾನ ಪದವಿ ಪೂರ್ವ ಕಾಲೇಜ್ ಅನ್ನು ರಾಜ್ಯ ವಿಜ್ಞಾನ,ತಂತ್ರಜ್ಞಾನ ಮತ್ತು ಸಣ್ಣ ನೀರಾವರಿ ಸಚಿವರಾದ ಎನ್.ಎಸ್.ಭೊಸರಾಜು ಉದ್ಘಾಟಿಸಿ ಮಾತನಾಡಿ ಶಿಕ್ಷಣವನ್ನು ವ್ಯಾಪಾರಿ ದೃಷ್ಟಿಯಲ್ಲಿ ನೋಡದೆ ಸೇವಾದೃಷ್ಠಿಯಲ್ಲಿ ನೋಡುವ ಮೂಲಕ ಇಂದು 1180 ವಿದ್ಯಾರ್ಥಿಗಳಿಗೆ ನೇತಾಜಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ಇಂದು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಜ್ಞಾನ ವಿಭಾಗವನ್ನು ಸಂಸ್ಥೆಯು ಪ್ರಾರಂಭಿಸಿದೆ.**

ನಂಜುಡಪ್ಪ ಅಯೋಗದ ವರದಿಯಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿಯೇ ಮಾನ್ವಿ ತಾಲೂಕು ಅತ್ಯಂತ ಹಿಂದುಳಿದಿರುವ ತಾಲೂಕಾಗಿದ್ದು. ಶೈಕ್ಷಣಿಕವಾಗಿ ಆರ್ಥಿಕವಾಗಿ,ಸಮಾಜಿ–ಕವಾಗಿ ಅತ್ಯಂತ ಹಿಂದುಳಿದಿರುವ ಈ ಭಾಗದ ಅಭಿವೃದ್ದಿಗಾಗಿ ಮುಖ್ಯಮಂತ್ರಿಗಳು ತಮ್ಮ ವಾರ್ಷಿಕ ಬಜೆಟ್ ನಲ್ಲಿ ಹೆಚ್ಚಿನ ಅನುದಾನವನ್ನು ನೀಡುತ್ತಿದ್ದಾರೆ ಪ್ರತಿ ವರ್ಷ ಶಿಕ್ಷಣ ಕ್ಷೇತ್ರಕ್ಕಾಗಿ ಸರಕಾರ ಈ ಭಾಗಕ್ಕೆ



1250 ಕೋಟಿ ಅನುದಾನ ನೀಡುತ್ತಿದೆ.ಅದ್ದರು ಕೂಡ ಎಸ್.ಎಸ್.ಎಲ್.ಸಿ, ಮತ್ತು ಪಿ.ಯು.ಸಿ. ವಾರ್ಷಿಕ ಪರೀಕ್ಷೆಯಲ್ಲಿ 33 ನೇ ಸ್ಥಾನದಲ್ಲಿರುತ್ತದೆ. ಸರ್ಕಾರ ಶಿಕ್ಷಣ ಇಲಾಖೆಯ ಮೂಲಕ ಈ ಬಾರಿಯ ಫಲಿತಾಂಶವನ್ನು ಹೆಚ್ಚಿಸುವುದಕ್ಕಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ.

ಸರ್ಕಾರಿ ಶಾಲೆಗಳ ಅಭಿವೃದ್ದಿಯ ಜೋತೆಗೆ ಈ ಭಾಗದಲ್ಲಿ ಕಳೆದ 25 ವರ್ಷಗಳಿಂದ 1995 ರಲ್ಲಿ ಪ್ರಾರಂಭಿಸಲಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಖಾಸಗಿ ಶಾಲೆಗಳನ್ನು ಗುರುತಿಸಿ ಅನುದಾನವನ್ನು ನೀಡುವುದಕ್ಕೆ ಕೂಡ ಚಿಂತನೆ ನಡೆಸುತ್ತಿದೆ. ಇಂದಿನ ದಿನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ ಬಹಳಷ್ಟು ಮುಂದುವರೆದಿದ್ದು. ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲ್ಲದೆ ಅಭಿವೃದ್ದಿ ಸಾಧ್ಯವಿಲ್ಲ ಎನ್ನುವ ಉದ್ದೇಶದಿಂದ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ವಿಷಯದಲ್ಲಿ ಪರಿಣಿತಿ ಹಾಗೂ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವುದಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಬೆಂಗಳೂರಿನ ಹೆಬ್ಬಳ ಹತ್ತಿರ ವಿಜ್ಞಾನ ಆಕಡೆಮಿಯನ್ನು ಸ್ಥಾಪನೆ ಮಾಡಲಾಗಿದೆ,

ಏಷ್ಯದಲ್ಲಿ ನಂ.1 ಹೆಸರುಗಳಿಸಿದ ವಿಜ್ಞಾನ ಕೇಂದ್ರಗಳನ್ನು ಮಂಗಳೂರಿನ ಪಿಲಿಕುಳದಲ್ಲಿ,ವಿ–ಜಯನಗರದಲ್ಲಿ 50ಕೋಟಿ ವೆಚ್ಚದಲ್ಲಿ ವಿಜ್ಞಾನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ರಾಯಚೂ–ರಿನ ವಿಜ್ಞಾನ ಕೇಂದ್ರವನ್ನು ಮೇಲ್ದಾರ್ಜೆಗೇ–ರಿಸುವುದಕ್ಕೆ 20ಕೋಟಿ, ತಾರಲಾಯ ನಿರ್ಮಾಣ–ಕ್ಕೆ 10 ಕೋಟಿ ನೀಡಲಾಗಿದೆ. ಕೋಲಾರ,ರಾಮನಗರ,ರಾಯಚೂರು ಜಿಲ್ಲೆಗಳಲ್ಲಿ ವಿಜ್ಞಾನ ಕೇಂದ್ರ ನಿರ್ಮಾಣಕ್ಕೆ ಅಗತ್ಯವಿರು ಜಮೀನು ಗುರುತಿಸಲಾಗಿದೆ. ರಾಜ್ಯದ 830 ಸರ್ಕಾರಿ ಶಾಲೆಗಳಿಗೆ ಟೆಲಿಸ್ಕೋಪ್‌ಗಳನ್ನು ನೀಡಲಾಗಿದೆ.

ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿನ ಶಾಲಾ ಮಕ್ಕಳಿಗೆ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ ವಾಹನಗಳನ್ನು ವ್ಯವಸ್ಥೆ ಮಾಡಲಾಗಿದೆ. ಎಂದು ತಿಳಿಸಿದರು. ಶಾಸಕ ಹಂಪಯ್ಯನಾಯಕ ಮಾತನಾಡಿದರು. .ಕಾಲೇಜಿನ 11 ಕೋಠಡಿಗಳಲ್ಲಿ ವಿಜ್ಞಾನ,ಇತಿಹಾಸ, ಗಣಿತ,ವಾಣಿಜ್ಯ, ಕಲಾ, ಕೃಷಿ, ಸಾಹಿತ್ಯ, ಸಂಸ್ಕೃತಿ, ಭಾಷೆ,ಖಗೋಳಶಾಸ್ತ್ರ, ಭೂಮಿ ಸಂರಕ್ಷಣೆ, ಆಯುರ್ವೇದ, ಅಬಾಕಾಸ್, ಮುಂತಾದ ವಿಷಯಗಳಿಗೆ ಸಂಬಂಧಿಸಿದ 270 ಕ್ಕೂ ಹೆಚ್ಚು ಮಾದರಿಗಳ ಪ್ರದರ್ಶನ ನಡೆಯಿತು. ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕೆ.ಈ.ನರಸಿಂಹ,ಕಾರ್ಯದರ್ಶಿ ವಿಜಯಲಕ್ಷ್ಮಿ ?ಮೇ, ರಾಜ್ಯ ಕುರುಬರ ಸಂಘದ ಅಧ್ಯಕ್ಷರಾದ ಎಂ.ಈ–ರಣ್ಣ, ನ.ಯೋ.ಪ್ರಾ.ಅಧ್ಯಕ್ಷ ಅಬ್ದುಲ್ ಗಫೂರಸಾಬ್, ಬಿ.ಕೆ.ಅಮರೇಶಪ್ಪ, ಪ.ಪೂ.ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರ್ ಹೊಕ್ರಾಣಿ, ತಾ. ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ್ ದೊಡ್ಮನಿ, ಸ.ನೌ.ಸಂಘದ ತಾ.ಅಧ್ಯಕ್ಷರಾದ ಸುರೇಶ ಕುರ್ಡಿ, ಪಕ್ಷಿಪ್ರೇಮಿ ಸಲ್ಲಾವುದ್ದೀನ್, ಕ.ರಾ.ಪ್ರಾ.ಶಾ.ಶಿ.ಸಂಘದ ತಾ.ಅಧ್ಯಕ್ಷರಾದ ಸಂಗಮೇಶ ಮುಧೋಳ್, ಖಾ.ಶಿ.ಸಂ.ಒಕ್ಕೂಟದ

ಅಧ್ಯಕ್ಷ ರಾಜಾ ಸುಭಾಶ್ಚಂದ್ರನಾಯಕ, ತಾ.ಪದವಿ ಪೂರ್ವ ಕಾಲೇಜು ಒಕ್ಕೂಟದ ಅಧ್ಯಕ್ಷ ತಿಪ್ಪಣ್ಣ ಬಾಗಲವಾಡ, ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಜಿ.ನಾಗರಾಜ್ ,ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಕೆ.ಶಾಂತಪ್ಪ, ಶರಣಯ್ಯನಾಯಕ ಗುಡದಿನ್ನಿ,ಬಾಲಸ್ವಾಮಿ ಕೊಡ್ಲಿ,ಶಿವಮೂರ್ತಿ, ತಾ.ಪ.ಉ.ಸಂಘದ ಅಧ್ಯಕ್ಷರಾದ ಆಂಜನೇಯ್ಯ, ಮುಖ್ಯಗುರು ಆನಿಸ್ ಫಾತೀಮ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು. ಮಾನ್ವಿ: ಪಟ್ಟಣದ ನೇತಾಜಿ ಸುಭಾಶಚ್ಚಂದ್ರ ಬೋಸ್ ಶಿಕ್ಷಣ ಸಂಸ್ಥೆಯ ಅವರಣದಲ್ಲಿ ನಡೆದ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಸಚಿವರಾದ ಎನ್. ಎಸ್.ಬೋಸರಾಜು ಚಾಲನೆ ನೀಡಿದರು. ಮಾನ್ವಿ: ಮಾನ್ವಿ: ಪಟ್ಟಣದ ನೇತಾಜಿ ಸುಭಾಶಚ್ಚಂದ್ರ ಬೋಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನೂತನ ವಿಜ್ಞಾನ ಕಾಲೇಜನ್ನು ಸಚಿವರಾದ ಎನ್.ಎಸ್.ಬೋಸರಾಜು ಉದ್ಘಾಟಿಸಿದರು.